ಸುದ್ದಿಗಳ ಹೊನಲು

# ಸಂಜೆ ಮುಗಿಲು

ಸಂಪುಟ: 21, ಸಂಚಿಕೆ: 308, ಪುಟಗಳು: 8, ಗುರುವಾರ, 15 ಆಗಸ್ಟ್ 2024 RNI NO. KARKAN/2002/08054
epaper: www.sanjemugilu.com

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ ₹3



ವೇಣು ಸಾರಥ್ಯದಲ್ಲಿ...

ಸಮಸ್ತ ದೇಶದ ಜನತೆಗೆ ಸ್ವಾತಂತ್ರ್ಯ 78ನೇ ದಿನಾಚರಣೆಯ ಶುಭಾಶಯಗಳು..

### ಸುಭಾಷಿತ

ಕಲಿಯಲು ತಿರಸ್ಕರಿಸುವುದು ಜೀವಿಸಲು ತಿರಸ್ಕರಿಸುವುದಕ್ಕೆ ಸಮನಾದುದು.
। ರಾಮಕೃಷ್ಣ ಪರಮಹಂಸ

### ಪಂಚಾಂಗ

(ಗುರುವಾರ 15, ಆಗಸ್ಟ್-2024)

- ಕ್ರೋಧಿನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ.
- ತಿಥಿ: ದಶಮಿ 10:26
- ನಕ್ಷತ್ರ: ಜ್ಯೇಷ್ಠಾ 12:51 ಯೋಗ: ವೈಧೃತಿ 14:57
- ಕರಣ: ಗರಜ 10:26 ಅಮೃತಕಾಲ: ಮಧ್ಯರಾತ್ರಿ 03:50 ರಿಂದ 05:29
- ರಾಹುಕಾಲ: 1:30ರಿಂದ 3:00
- ಗುಳಿಕಕಾಲ: 09:00 ರಿಂದ 10:30
- ಯಮಗಂಡಕಾಲ: 06:00 ರಿಂದ 07:30




## ದೇಶ ಮೊದಲು.. ಭಾರತವನ್ನು ಬಲಪಡಿಸೋಣವೆಂದ ಪ್ರಧಾನಿ ಮೋದಿ

# ದೊಡ್ಡ ಸುಧಾರಣೆಗಳಿಗೆ ಬದ್ಧ

**ನವದೆಹಲಿ:** ಜನಜೀವನ ಪರಿವರ್ತಿಸಲು, ದೇಶವನ್ನು ಬಲಪಡಿಸಲು ದೊಡ್ಡ ಸುಧಾರಣೆಗಳಿಗೆ ಬದ್ಧ. ನಮಗೆ ರಾಷ್ಟ್ರ ಮೊದಲು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಜ್ಞೆ ಮಾಡಿದರು.

78ನೇ ಸ್ವಾತಂತ್ರ ದಿನಾಚರಣೆ ಹಿನ್ನೆಲೆಯಲ್ಲಿ ಕೆಂಪುಕೋಟೆಯಲ್ಲಿ ಧ್ವಜಾರೋಹಣ ನೆರವೇರಿಸಿ ಬಳಿಕ ದೇಶವನ್ನುದ್ದೇಶಿ ಮಾತನಾಡಿದ ಮೋದಿ, ದೇಶದ ಸ್ವಾತಂತ್ರ್ಯಕ್ಕಾಗಿ ಜೀವನ ಸಮರ್ಪಣೆ ಮಾಡಿದ, ಸಂಘರ್ಷ ಮಾಡಿದ ಅಗಣಿತ ಸ್ವಾತಂತ್ರ್ಯ ಹೋರಾಟಗಾರರ ಸ್ಮರಣೆ ಮಾಡುವ ಶುಭ ದಿನ ಎಂದು ಹೇಳಿದರು.

ಸುಧಾರಣೆಗಳಿಗೆ ನಮ್ಮ ಬದ್ಧತೆ ಗುಲಾಬಿ ಪತ್ರಿಕೆಯ ಸಂಪಾದಕೀಯಕ್ಕಾಗಿ ಅಲ್ಲ. ದೇಶವನ್ನು ಬಲಿಷ್ಠಗೊಳಿಸುವುದು ಎಂದು ನಾನು ದೇಶವಾಸಿಗಳಿಗೆ ಭರವಸೆ ನೀಡಲು ಬಯಸುತ್ತೇನೆ. ತಜ್ಞರು ಅಥವಾ ಬೌದ್ಧಿಕ ಚರ್ಚಾ ಕ್ಲಬ್‌ಗಳನ್ನು ತೃಪ್ತಿಪಡಿಸಲು ಸರ್ಕಾರವು ವ್ಯಾಪಕವಾದ ಸುಧಾರಣೆಗಳನ್ನು ಜಾರಿಗೆ ತಂದಿಲ್ಲ. ದೇಶವನ್ನು ಪ್ರಗತಿಯತ್ತ ಕೊಂಡೊಯ್ಯುವ 'ನೇಷನ್ ಫಸ್ಟ್' ಪ್ರತಿಜ್ಞೆಯೇ ನಮ್ಮ ಆದ್ಯತೆ ಎಂದು ತಿಳಿಸಿದರು.

ದೇಶದ ರಕ್ಷಣೆ ಮತ್ತು ನಿರ್ಮಾಣಕ್ಕೆ ಪೂರ್ಣ ಮನಸ್ಸಿನಿಂದ, ಬದ್ಧತೆಯಿಂದ ರೈತರು ಮತ್ತು ಯುವಕರು ಕೆಲಸ ಮಾಡುತ್ತಿದ್ದಾರೆ. ನಾನು ಎಲ್ಲರಿಗೂ ಗೌರವ ಪೂರ್ವಕವಾಗಿ ನಮಸ್ಕರಿಸುತ್ತೇನೆ. ಅವಿತರ ಹೋರಾಟದಿಂದ ಸ್ವಾತಂತ್ರ್ಯ ಬಂದಿದೆ. ಅಂದು 40 ಕೋಟಿ ಜನರು ಒಂದು ಕನಸು, ಸಂಕಲ್ಪದೊಂದಿಗೆ ಹೋರಾಡಿದರು. ಅವರದೇ ರಕ್ತ ನಮ್ಮಲ್ಲಿ ಇದೆ ಎನ್ನುವ ಹೆಮ್ಮೆ ಇದೆ. 40 ಕೋಟಿ ಜನರು ವಿಶ್ವದ ಬಲಿಷ್ಠ ಸರ್ಕಾರವನ್ನು ಕಿತ್ತೊಗೆಯಿತು. 140 ಕೋಟಿ ಜನರು ಸಂಕಲ್ಪದೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಹೊರಟರೇ ಏನೇ ಸವಾಲು ಬಂದರೂ, ಎಲ್ಲವನ್ನೂ ಮೀರಿ ನಾವು ಸಮೃದ್ಧ ಭಾರತ್, ವಿಸಕಿತ ಭಾರತ ಕನಸು ಪೂರ್ಣ ಮಾಡಬಹುದು ಎಂದು ಕರೆ ನೀಡಿದರು.



## ಕೆಂಪುಕೋಟೆಯಲ್ಲಿ ಸ್ವಾತಂತ್ರ್ಯೋತ್ಸವದ ಸಂಭ್ರಮ

**ನವದೆಹಲಿ:** ದೇಶದೆಲ್ಲೆಡೆ 78ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ ಮನೆಮಾಡಿದೆ. ಸಮಸ್ತ ಭಾರತೀಯರು ದೇಶಭಕ್ತಿ ಭಾವ ಮೆರೆದಿದ್ದಾರೆ. ಇತ್ತ ನವದೆಹಲಿಯ ಕೆಂಪುಕೋಟೆಯಲ್ಲಿ ಸ್ವಾತಂತ್ರ ದಿನವನ್ನು ಆಚರಿಸಲಾಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಬೆಳಗ್ಗೆ 7:30ರ ಸುಮಾರಿಗೆ ಧ್ವಜಾರೋಹಣ ನೆರವೇರಿಸಿ, ದೇಶದ ಜನತೆಗೆ ಸ್ವಾತಂತ್ರ್ಯೋತ್ಸವದ ಶುಭಕೋರಿದರು. ಇದಕ್ಕೂ ಮೊದಲು ಪ್ರಧಾನಿ ಮೋದಿ ಅವರು ರಾಜ್‌ಘಾಟ್‌ನಲ್ಲಿ ಮಹಾತ್ಮ ಗಾಂಧಿ ಅವರಿಗೆ ಪುಷ್ಪ ನಮನ ಸಲ್ಲಿಸಿದರು. ರಾಜ್‌ಘಾಟ್‌ನಿಂದ ಕೆಂಪುಕೋಟೆಗೆ ತಲುಪಿದರು. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪ್ರಧಾನಿಯನ್ನು ಸ್ವಾಗತಿಸಿದರು. ನರೇಂದ್ರ ಮೋದಿ ಅವರಿಗೆ ಗನ್ ಸೆಲ್ಯೂಟ್ ಮೂಲಕ ಸ್ವಾಗತ ಕೋರಲಾಯಿತು. ಸಾಂಪ್ರದಾಯಿಕ ಕೆಂಪು ಕೋಟೆಯ ಮೇಲೆ ತ್ರಿವರ್ಣ ಧ್ವಜಾರೋಹಣ ನೆರವೇರಿಸಿದರು. ಸಮಾರಂಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದಾರೆ. ಪುಟ 2



## ಸಂಕ್ಷಿಪ್ತ ಸುದ್ದಿ

### ಹೊಸ ಕ್ರಿಮಿನಲ್ ಕಾನೂನುಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಿದ ಗೌರವ



**ನವದೆಹಲಿ:** ದೇಶಾದ್ಯಂತ ಜಾರಿಗೊಳಿಸಲಾದ ಹೊಸ ಕ್ರಿಮಿನಲ್ ಕಾನೂನುಗಳು ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಿದ ಗೌರವ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತವು ಈಗ ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿದೆ ಮತ್ತು ವಿಶ್ವದ ಮೂರು ದೊಡ್ಡ ಆರ್ಥಿಕತೆಗಳಲ್ಲಿ ಒಂದಾಗಲು ಸಿದ್ಧವಾಗಿದೆ ಎನ್ನುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

ಈ ಯಶಸ್ಸು ರೈತರು ಮತ್ತು ಕಾರ್ಮಿಕರ ಕಠಿಣ ಪರಿಶ್ರಮ, ಉದ್ಯಮಿಗಳ ದೂರದೃಷ್ಟಿ ಮತ್ತು ದೇಶದ ದೂರದೃಷ್ಟಿಯ ನಾಯಕತ್ವದ ಫಲಿತಾಂಶವಾಗಿದೆ ಎಂದು ಬಣ್ಣಿಸಿದರು. ಪುಟ 2

### ಬಿಬಿಎಂಪಿಗೆ ವರದಿ ಸಲ್ಲಿಸಿದ ಟ್ರಾಫಿಕ್ ಪೊಲೀಸರು



**ಬೆಂಗಳೂರು:** ರಾಜಧಾನಿ ಬೆಂಗಳೂರಲ್ಲಿ ಎರಡು ದಿನ ಹಿಂದಷ್ಟೇ ರಾತ್ರಿ ಸುರಿದ ಭಾರಿ ಮಳೆ ಅವಾಂತರ ಸೃಷ್ಟಿಸಿತ್ತು. ಬೆಂಗಳೂರಿನ ರಸ್ತೆಗಳು, ಅಂಡರ್ ಪಾಸ್ ಗಳು ಜಲಾವೃತವಾಗಿದ್ದವು. ಮಳೆ ಅವಾಂತರ ಸೃಷ್ಟಿಸಿದ್ದರಿಂದ ಡಿಸಿಎಂ ಡಿಕೆ ಶಿವಕುಮಾರ್ ಸಿಟಿ ರೌಂಡ್ಸ್ ಕೂಡ ಮಾಡಿದ್ದರು. ಇದೀಗ ಇದೇ ವಿಚಾರದ ಬಗ್ಗೆ ಪಾಲಿಕೆಗೆ ಪೊಲೀಸ್ ಇಲಾಖೆ ವರದಿ ನೀಡಿದೆ. ಸದ್ಯ ಮಳೆ ಬಂದು ಅವಾಂತರ ಸೃಷ್ಟಿಯಾದರೂ, ಮರ ಬಿದ್ದು ರಸ್ತೆ ಜಾಮ್ ಆದರೂ ಬಿಬಿಎಂಪಿಗಿಂತ ಮೊದಲೇ ಸ್ಥಳಕ್ಕೆ ಬರುವ ಪೊಲೀಸರು ಇದೀಗ ಬೆಂಗಳೂರಲ್ಲಿ ಪದೇ ಪದೇ ಸಮಸ್ಯೆ ತಂದಿಡುವ ಸ್ಥಳಗಳ ಬಗ್ಗೆ ಪಾಲಿಕೆಗೆ ರಿಪೋರ್ಟ್ ಕೊಟ್ಟಿದ್ದಾರೆ. ಪುಟ 2

## ಧ್ವಜಾರೋಹಣ ನೆರವೇರಿಸಿದ ಸಿಎಂ



**ಬೆಂಗಳೂರು:** ದೇಶದೆಲ್ಲೆಡೆ 78ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ ಮನೆಮಾಡಿದೆ. ಸಮಸ್ತ ಭಾರತೀಯರು ದೇಶಭಕ್ತಿ ಭಾವ ಮೆರೆದಿದ್ದಾರೆ. ಇದರ ಭಾಗವಾಗಿ ಇತ್ತ ರಾಜ್ಯದ ಸಿಎಂ ನಿವಾಸದಲ್ಲಿ ಸ್ವಾತಂತ್ರ ದಿನ ಆಚರಿಸಲಾಯಿತು.

ಸಿಎಂ ಸಿದ್ದರಾಮಯ್ಯ ತಮ್ಮ ನಿವಾಸ ಕಾವೇರಿಯಲ್ಲಿ ಧ್ವಜಾರೋಹಣ ನೆರವೇರಿಸಿ, ನಾಡಿನ ಜನತೆಗೆ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯ ಕೋರಿದರು. ಇದೇ ವೇಳೆ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು.

ನಂತರ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಧ್ವಜಾರೋಹಣ ನೆರವೇರಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ದ್ವಜಾರೋಹಣ ನೆರವೇರಿಸಿದ ಬಳಿಕ ಡಿಸಿಎಂ ಚನ್ನಪಟ್ಟಣಕ್ಕೆ ತೆರಳಿದರು.

## ಆರ್‌ಟಿಒ ಅಧಿಕಾರಿ ಮನೆ ಮೇಲೆ ಲೋಕಾಯುಕ್ತ ದಾಳಿ



**ಬಳ್ಳಾರಿ:** ಆರ್‌ಟಿಒ ಕಚೇರಿಯ ಸಿಬ್ಬಂದಿ ಮನೆ ಮೇಲೆ ಲೋಕಾಯುಕ್ತ ದಾಳಿ ನಡೆಸಿ ಲಕ್ಷಾಂತರ ಮೌಲ್ಯದ ಚಿನ್ನಾಭರಣ, ನಗದು ವಶಕ್ಕೆ ಪಡೆದಿದೆ.

ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ವಿವೇಕಾನಂದ ನಗರದಲ್ಲಿರುವ ಆರ್‌ಟಿಒ ಕಚೇರಿಯ ಎಸ್‌ಡಿಸಿ ನಾಗೇಶ ಅವರ ಮನೆಯ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿದ್ದಾರೆ.




## ಹೂ, ಹಣ್ಣು, ತರಕಾರಿ ಬೆಲೆ ಮತ್ತೆ ಏರಿಕೆ



**ಬೆಂಗಳೂರು:** ವರಮಹಾಲಕ್ಷ್ಮೀ ಹಬ್ಬಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಈ ಬಾರಿ ವರಮಹಾಲಕ್ಷ್ಮೀಯನ್ನು ಅದ್ದೂರಿಯಿಂದ ಬರಮಾಡಿಕೊಳ್ಳಲು ಬೆಂಗಳೂರು ಮಂದಿ ಸಜ್ಜಾಗುತ್ತಿದ್ದಾರೆ. ಹೀಗಾಗಿ ನಗರದ ಕೆಆರ್ ಮಾರ್ಕೆಟ್‌ನಲ್ಲಿ ಬುಧವಾರವೇ ಎಲ್ಲಿ ನೋಡಿದರೂ ಜನಜಂಗುಳಿ ಕಾಣಿಸುತ್ತಿತ್ತು. ಹಬ್ಬಕ್ಕೆ ಬೇಕಾದ ಹೂ, ಹಣ್ಣು, ಖರೀದಿ ಮಾಡುವಲ್ಲಿ ಜನ ವ್ಯಸ್ತರಾಗಿದ್ದಾರೆ. ಈ ಮಧ್ಯೆ ಹೂ, ಹಣ್ಣು, ತರಕಾರಿಗಳ ಬೆಲೆ ಕೊಂಚ ಏರಿಕೆಯಾಗಿದೆ.

ವರಮಹಾಲಕ್ಷ್ಮೀ ಕೂರಿಸಬೇಕು ಅಂದರೆ ಬಗೆಬಗೆಯ ಹೂಗಳನ್ನು ಖರೀದಿ ಮಾಡಲೇಬೇಕು. ಇದೇ ಕಾರಣದಿಂದಾಗಿ ಈ ಬಾರಿ ಹೂವಿಗೆ ಬೇಡಿಕೆ ಜಾಸ್ತಿಯಾಗಿದ್ದು, ಕಳೆದ ವಾರ 100 ರೂಪಾಯಿಗೆ ಸಿಗುತ್ತಿದ್ದ ಹೂವಿನ ಬೆಲೆ ಈಗ ಮೂರು ಪಟ್ಟು ಏರಿಕೆಯಾಗಿದೆ. ಅದರಲ್ಲೂ ಸೇವಂತಿಗೆ, ಮಲ್ಲಿಗೆ, ಕನಕಾಂಬರ ಹೂವಿನ ಬೆಲೆಯಂತೂ ಗಗನಕ್ಕೇರಿದೆ.

**ಬೆಂಗಳೂರಿನಲ್ಲಿ ಹೂವಿನ ಬೆಲೆ ಎಷ್ಟಿದೆ?:** ಗಣೆಜಲು ಹೂವಿನ ಬೆಲೆ ಮಾರಿಗೆ 250 ರೂ. ಹಾಗೂ- ಕೆಜಿಗೆ 600 ರೂ. ಇದೆ. ಸೇವಂತಿಗೆ ಬೆಲೆ ಮಾರಿಗೆ 150 ರೂ. ಕೆಜಿಗೆ 300 ರೂ. ಇದೆ. ಮಲ್ಲಿಗೆ ಮಾರಿಗೆ 160 ರೂ. ಕೆಜಿಗೆ 1200 ರೂ. ಇದೆ. ಕನಕಾಂಬರ ಮಾರಿಗೆ 500, ಕೆಜೆಗೆ 3000 ರೂ. ಇದೆ. ಗುಲಾಬಿ ಹೂ ಮಾರಿಗೆ 160, ಕೆಜೆಗೆ 600 ರೂ. ಇದೆ. ಚೆಂಡೂ ಹೂ ಮಾರಿಗೆ 150, ಕೆಜೆಗೆ 600 ರೂ. ಇದೆ. ಪರ್ಪಲ್ ಸೇವಂತಿಗೆ ಮಾರಿಗೆ 500 ರೂ. ಇದೆ. ತುಳಸಿ ಮಾರಿಗೆ 200, ಕೆಜಿಗೆ 1800 ರೂ. ಇದೆ. ತಾವರೆ ಹೂ ಜೋಡಿಗೆ 100 ರೂ. ಇದೆ.

ತರಕಾರಿಗಳ ಬೆಲೆ ಕಳೆದ ವಾರಕ್ಕೆ ಹೋಲಿಕೆ ಮಾಡಿದ್ರೆ 10 ರಿಂದ 20 ರಷ್ಟು ಏರಿಕೆಯಾಗಿದೆ. ಅದರಲ್ಲಿ ಕ್ಯಾರೆಟ್ , ಆಲೂಗಡ್ಡೆ , ಈರುಳ್ಳಿ, ಬಟಾಣಿ, ಬೀನ್ಸ್ ಬೆಲೆ ಸ್ವಲ್ಪ ದುಬಾರಿಯಾಗಿದೆ. ಸದ್ಯ ಒಂದು ವಾರದಿಂದ ಮಳೆ ಬರುತ್ತಿರುವ ಕಾರಣ ತರಕಾರಿ ಕಡಿಮೆ ಬರ್ತಿದೆ. ಪುಟ 2

# ಸಂಜೆ ಟಿಪ್ಸ್

## ಬಿಜಿಎಂಐ ಡಿಜಿಟಲ್ ಜಾಹೀರಾತಿನಲ್ಲಿ ಹೊಸ ಈವೆಂಟ್, ಮೋಡಗಳು ಮತ್ತು ಮ್ಯಾಪ್‌ಗಳ ಸ್ಟೈಲಿಶ್ ಅನಾವರಣ!

ಸಮಸ್ಯೆ ಪರಿಹಾರ ವಲಯದಲ್ಲಿ ಪರಿಣಿತಿ ಹೊಂದಿದ್ದು, ವೀಡಿಯೋ ಪ್ರೊಡಕ್ಷನ್ ಮತ್ತು ಡಿಜಿಟಲ್ ಮಾರ್ಕೆಟಿಂಗ್‌ನಲ್ಲೂ ತನ್ನ ವ್ಯಾಪ್ತಿಯನ್ನು ಹೊಂದಿರುವ ಪ್ಯಾಡ್ ಪ್ಲೇ ಕನ್ನಡ ಜಾಹೀರಾತು ಚಿತ್ರ ವಿನ್ನರ್, ವಿನ್ನರ್ ಚಿಕನ್ ಡಿನ್ನರ್ ಬಗ್ಗೆ ಅಪಾರ ಮೆಚ್ಚುಗೆಯನ್ನು ಪಡೆಯುತ್ತಿದೆ. ಬಿಜಿಎಂಐ - ಬ್ಯಾಟಲಗ್ರೌಂಡ್ಸ್ ಮೊಬೈಲ್ ಇಂಡಿಯಾ ಗಾಗಿ ತಯಾರಿಸಿದ ಡಿಜಿಟಲ್ ಫಿಲಂ ಆಕರ್ಷಕ ಮತ್ತು ಅಮೋಘವಾದ ರೀತಿಯಲ್ಲಿ ಗೇಮ್ ಅಪ್ಡೇಟ್ಗಳನ್ನು ವಿವರಿಸುತ್ತದೆ. ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಫಿಲಂ ಅನ್ನು ಚಿತ್ರೀಕರಿಸಲಾಗಿದ್ದು, ಈ ಪ್ರದೇಶದ ಸೌಂದರ್ಯವನ್ನು ಇದು ಚಿತ್ರಿಸುತ್ತದೆ. ಅಷ್ಟೇ ಅಲ್ಲ, ಈ ಭಾಗದ ಜನರಲ್ಲಿ ಗೇಮ್ ಬಗ್ಗೆ ಇರುವ ಪ್ರೀತಿಯನ್ನೂ ಇದು ತಿಳಿಸುತ್ತದೆ. ಸೈಕ್ ಬಿಜಿಎಂಐ ಪವರ್ ಮತ್ತು ನೈಜ ಜಗತ್ತಿನ ಅನುಭವಗಳ ಸಮ್ಮಿಶ್ರಣವನ್ನು ಇದು ಹೊಂದಿದ್ದು ಕರ್ನಾಟಕದ ಗೇಮಿಂಗ್ ಸಮುದಾಯದ ಜೊತೆಗೆ ಆಳವಾದ ಬಾಂಧವ್ಯವನ್ನು ರೂಪಿಸುತ್ತದೆ. ಹೈಪರ್ ಲೋಕಲ್ ಡಿಜಿಟಲ್ ಜಾಹೀರಾತಿಗೆ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆಯ ಬಗ್ಗೆ ಮಾತನಾಡಿದ ಕ್ರಾಫ್ಟಾನ್ ಇಂಡಿಯಾದ ಮಾರ್ಕೆಟಿಂಗ್ ವಿಭಾಗದ ಮುಖ್ಯಸ್ಥ ಹಾಗೂ ಸಹಾಯಕ ನಿರ್ದೇಶಕ ಶೃಂಜೋಯ್ ದಾಸ್ ''ನಮ್ಮ ಎಲ್ಲ ಕ್ಯಾಂಪೇನ್ಗಳಲ್ಲೂ ನಾವು ದೇಶದ ಎಲ್ಲೆಡೆ ಇರುವ ಗೇಮರ್ಗಳ ಜೊತೆಗೆ ಬಾಂಧವ್ಯವನ್ನು ನಾವು ಬೆಸೆಯುತ್ತೇವೆ. ಈ ಬಾರಿ, ಕರ್ನಾಟಕದಲ್ಲಿನ ನಮ್ಮ ಗೇಮರ್ಗಳಿಗೆ ಏನಾದರೂ ಒಂದು ವಿಶೇಷವನ್ನು ಒದಗಿಸುವ ಗುರಿಯನ್ನು ಹೊಂದಿದ್ದೆವು. ಹೀಗಾಗಿ, ಜಾಹೀರಾತು ವೀಡಿಯೋದ ಮುಖ್ಯ ಸ್ಥಳವನ್ನಾಗಿ ನಾವು ಬೆಂಗಳೂರನ್ನು ಆಯ್ಕೆ ಮಾಡಿಕೊಂಡೆವು. ಕರ್ನಾಟಕದ ಅದ್ಭುತ ಸ್ಥಳಗಳು ಮತ್ತು ಇಲ್ಲಿನ ನಾಗರಿಕರ ಪ್ರತಿ ದಿನದ ಜೀವನವನ್ನು ನಾವು ತೋರಿಸಲು ನಿರ್ಧರಿಸಿದೆವು. ಸ್ಥಳೀಯ ಕಲಾವಿದರ ಜೊತೆಗೆ ಸೇರಿ ನಾವು ಕನ್ನಡದಲ್ಲಿ ಸುಂದರವಾದ ಟ್ಯೂನ್ ಅನ್ನೂ ರಚಿಸಿದ್ದೇವೆ. ಕರ್ನಾಟಕದಲ್ಲೇ ಪರಿಕಲ್ಪನೆ ರೂಪಿಸಿ, ಚಿತ್ರೀಕರಿಸಿದ ಈ ಜಾಹೀರಾತಿನ ಮೂಲಕ ರಾಜ್ಯದಲ್ಲಿನ ನಮ್ಮ ಬಿಜಿಎಂ ಪ್ರಿಯರಿಗೆ ಸಂಪೂರ್ಣ ಅಸಲಿ ಅನುಭವವನ್ನು ಒದಗಿಸಲು ನಾವು ಬಯಸಿದ್ದೇವೆ. ಸಮುದಾಯದಿಂದ ಇದು ಪಡೆದ ಧನಾತ್ಮಕ ಪ್ರತಿಕ್ರಿಯೆಯಿಂದ ನಾವು ಉತ್ಸಾಹಿತರಾಗಿದ್ದೇವೆ'' ಎಂದಿದ್ದಾರೆ.

## ಕಾರ್ನ್ ಬೇಲ್

### ಪಾಕ ಶಾಲೆ



### ಮಾಡುವ ವಿಧಾನ

ಒಂದು ಪಾತ್ರೆಗೆ ಬೇಯಿಸಿದ ಕಾರ್ನ್ ಹಾಕಿ. ಅದಕ್ಕೆ ತುರಿದ ಆಲೂಗಡ್ಡೆಯನ್ನು ಹಾಕಿ. ನಂತ್ರ ಈರುಳ್ಳಿ, ಟೋಮ್ಯಾಟೋ, ಕೊತ್ತಂಬರಿ ಸೊಪ್ಪು, ಹುಣಸೆಹಣ್ಣಿನ ಸಾಸ್, ಹಸಿರು ಚಟ್ನಿ, ನಿಂಬೆ ರಸ, ಉಪ್ಪು ಹಾಗೂ ಚಾಟ್ ಮಸಾಲಾ ಹಾಕಿ ಮಿಕ್ಸ್ ಮಾಡಿ. ರುಚಿ ರುಚಿ ಕಾರ್ನ್ ಬೇಲ್ ಸಿದ್ಧ.

### ಬೇಕಿರುವ ಸಾಮಗ್ರಿ

2 ಕಪ್ ಬೇಯಿಸಿದ ಕಾರ್ನ್, 2 ಬೇಯಿಸಿದ ಆಲೂಗಡ್ಡೆ. 1/2 ಕಪ್ ನುಣ್ಣಗೆ ಕತ್ತರಿಸಿದ ಈರುಳ್ಳಿ. 1/2 ಕಪ್ ನುಣ್ಣಗೆ ಕತ್ತರಿಸಿದ ಟೋಮ್ಯಾಟೋ,1/2 ಕಪ್ ಕೊತ್ತಂಬರಿ ಸೊಪ್ಪು, 2 ಟೀಸ್ಪೂನ್ ಹುಣಿಸೆಹಣ್ಣಿನ ಸಾಸ್, 1 ಟೀಸ್ಪೂನ್ ಹಸಿರು ಚಟ್ನಿ, 2 ಟೀಸ್ಪೂನ್ ನಿಂಬೆ ರಸ, ರುಚಿಗೆ ತಕ್ಕಂತೆ ಉಪ್ಪು. 1/2 ಟೀಸ್ಪೂನ್ ಚಾಟ್ ಮಸಾಲಾ.

## ಕರೀನಾ ಕಪೂರ್ ಸೌಂದರ್ಯದ ಗುಟ್ಟು



ವಯಸ್ಸಾದ ಮೇಲೆ ಚರ್ಮದಲ್ಲಿ ಸುಕ್ಕುಗಳು ಮೂಡುವುದು ಸಹಜ ಪ್ರಕ್ರಿಯೆ, ಇದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಚರ್ಮ ಸುಕ್ಕುಗಟ್ಟುವುದನ್ನು ಸ್ವಲ್ಪ ಕಾಲ ಮುಂದೆ ಹಾಕಬಹುದು. ಬಾಲಿವುಡ್ ನಟಿ ಕರೀನಾ ಕಪೂರ್ 43 ನೇ ವಯಸ್ಸಿಗೆ ಕಾಲಿಟ್ಟರೂ ಅವರ ಸ್ಕಿನ್ ಯೌವನದಿಂದ ಕೂಡಿದೆ. ಹಾಗಾಗಿ ಅವರಿಗೆ ವಯಸ್ಸಾಗಿರುವುದೇ ತಿಳಿಯುತ್ತಿಲ್ಲ. ಹಾಗಾದ್ರೆ ಅವರು ತಮ್ಮ ಯೌವನವನ್ನು ಹೇಗೆ ಕಾಪಾಡಿಕೊಂಡಿದ್ದಾರೆ? ಚರ್ಮದ ಸುಕ್ಕುಗಳನ್ನು ನಿಯಂತ್ರಿಸಲು ಅವರು ಯಾವ ಮಾರ್ಗ ಅನುಸರಿಸುತ್ತಾರೆ? ಎಂಬುದಕ್ಕೆ ಮಾಹಿತಿ ಇಲ್ಲಿದೆ ನೋಡಿ. ಕರೀನಾ ಕಪೂರ್ ಅವರು ಪ್ರತಿದಿನ ಚರ್ಮದ ಆರೈಕೆಯಲ್ಲಿ ತೊಡಗಿಕೊಳ್ಳುತ್ತಾರೆ. ಅವರು ದಿನಕ್ಕೆ ಎರಡು ಬಾರಿ ಚರ್ಮಕ್ಕೆ ಮಾಯಿಶ್ಚರೈಸಿಂಗ್, ಟೋನಿಂಗ್ ಮತ್ತು ಕ್ಲೀನಿಂಗ್ ಮಾಡುತ್ತಾರೆ. ಅವರು ತನ್ನ ಚರ್ಮದ ನೈಸರ್ಗಿಕ ತೈಲಗಳನ್ನು ಕಾಪಾಡುವಂತಹ ಮಾಯಿಶ್ಚರೈಸಿಂಗ್ ಕ್ಲೆನ್ಸರ್ಗಳನ್ನು ಬಳಸುತ್ತಾರೆ. ಟೋನರ್ನ ನಿಯಮಿತ ಬಳಕೆಯಿಂದ ಅವರ ಚರ್ಮದ ಪಿಎಚ್ ಮಟ್ಟ ಸಮತೋಲನದಲ್ಲಿದೆ ಮತ್ತು ಅವರು ಪ್ರತಿದಿನ ಮಾಯಿಶ್ಚರೈಸರ್ ನೊಂದಿಗೆ ತನ್ನ ಚರ್ಮವನ್ನು ಹೈಡ್ರೀಕರಿಸುತ್ತಾರೆ. ಹಾಗೇ ಯುವಿ ಕಿರಣಗಳಿಂದ ತನ್ನ ಚರ್ಮವನ್ನು ರಕ್ಷಿಸಲು ಕರೀನಾ ಹೊರಗೆ ಹೋದಾಗ ಯಾವಾಗಲೂ ಕನಿಷ್ಠ ಎಸ್ಪಿಎಫ್ 30 ಬ್ರಾಡ್-ಸ್ಪೆಕ್ಟ್ರಮ್ ಸನ್‌ಸ್ಕ್ರೀನ್ ಹಚ್ಚುತ್ತಾರೆ. ಇದು ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದರಿಂದ ಉಂಟಾಗುವ ಸುಕ್ಕುಗಳು, ಕಪ್ಪು ಕಲೆಗಳು ಮತ್ತು ಅಕಾಲಿಕ ವಯಸ್ಸಾದ ಇತರ ಚಿಹ್ನೆಗಳನ್ನು ತಪ್ಪಿಸಲು ಸಹಾಯ ಮಾಡುತ್ತದೆ.ಆಕ್ಸಿಡೇಟಿವ್ ಒತ್ತಡ ಮತ್ತು ಫ್ರೀ ರಾಡಿಕಲ್ಗಳ ವಿರುದ್ಧ ಹೋರಾಡಲು ಕರೀನಾ ತನ್ನ ಚರ್ಮಕ್ಕೆ ಪ್ರತಿದಿನ ವಿಟಮಿನ್ ಸಿ ಮತ್ತು ಇ ನಂತಹ ಆಯಂಟಿ ಆಕ್ಸಿಡೆಂಟ್ ಹೆಚ್ಚಿರುವ ಸೀರಮ್ಗಳನ್ನು ಬಳಸುತ್ತಾರೆ. ಅವರ ಆದ್ಯತೆಯ ಪದಾರ್ಥಗಳು ವಿಟಮಿನ್ ಸಿ ಮತ್ತು ಇ. ಇವು ಕಾಲಜನ್ ಉತ್ಪತ್ತಿಯನ್ನು ಹೆಚ್ಚಿಸುವ ಮೂಲಕ ಮಾಲಿನ್ಯದಿಂದ ಚರ್ಮವನ್ನು ರಕ್ಷಿಸಿ ಚರ್ಮಕ್ಕೆ ಕಾಂತಿ, ಯೌವನವನ್ನು ನೀಡುತ್ತದೆ. ಹಾಗೇ ಅವರು ಪ್ರತಿದಿನ ಸಾಕಷ್ಟು ನೀರನ್ನು ಕುಡಿಯುವ ಮೂಲಕ ಚರ್ಮವನ್ನು ಒಳಗಿನಿಂದ ಹೈಡ್ರೇಟ್ ಮಾಡುತ್ತದೆ. ಹಾಗೇ ಅವರು ಚರ್ಮವನ್ನು ಹೊರಗಿನಿಂದ ಹೈಡ್ರೇಟ್ ಮಾಡಲು ಮಾಯಿಶ್ಚರೈಸಿಂಗ್ ಮಾಸ್ಕ್‌ಗಳು ಮತ್ತು ಸೀರಮ್ಗಳನ್ನು ಹಚ್ಚುತ್ತಾರೆ. ಹಾಗೇ ನಟಿ ಕರೀನಾ ಆರೋಗ್ಯಕರ ಕೊಬ್ಬುಗಳು, ಜೀವಸತ್ವಗಳು ಮತ್ತು ಖನಿಜಗಳಿಂದ ತುಂಬಿದ ಸಮತೋಲಿತ ಆಹಾರವನ್ನು ಸೇವಿಸುತ್ತಾರೆ. ಅವರ ಊಟದಲ್ಲಿ ಹಣ್ಣುಗಳು, ತರಕಾರಿಗಳು, ಬೀಜಗಳು ಮತ್ತು ಧಾನ್ಯಗಳನ್ನು ಸೇರಿಸಿಕೊಳ್ಳುತ್ತಾರೆ. ಹಾಗೇ ಚರ್ಮದ ಆರೋಗ್ಯಕ್ಕಾಗಿ ಸಾಕಷ್ಟು ಪ್ರೋಟೀನ್ ಅನ್ನು ಅವರು ಸೇವಿಸುತ್ತಾರೆ. ಅದರ ಜೊತೆಗೆ ಪ್ರತಿ ರಾತ್ರಿ 7-8 ಗಂಟೆಗಳ ಕಾಲ ಉತ್ತಮ ನಿದ್ರೆಯನ್ನು ಮಾಡುತ್ತಾರೆ. ಇದು ಡಾರ್ಕ್ ಸರ್ಕಲ್, ಮಂದ ಮೈಬಣ್ಣವನ್ನು ನಿವಾರಿಸುತ್ತದೆ.

## ತೂಕ' ಇಳಿಸಿಕೊಳ್ಳಲು ಸಹಾಯ ಮಾಡುತ್ತಾ ನೆಲಗಡಲೆ?



ನೆಲಗಡಲೆಯನ್ನು ಅಡುಗೆಗೆಗಳಲ್ಲಿ ಬಳಸುತ್ತಾರೆ. ಇದು ತಿನ್ನಲು ಬಹಳ ರುಚಿಕರವಾಗಿರುತ್ತದೆ. ಇದು ಆರೋಗ್ಯಕ್ಕೂ ಕೂಡ ತುಂಬಾ ಒಳ್ಳೆಯದು. ಆದರೆ ಈ ನೆಲಗಡಲೆಯನ್ನು ಸೇವಿಸಿದರೆ ತೂಕ ಹೆಚ್ಚಾಗುತ್ತದೆ ಎಂದು ನಮ್ಮಲ್ಲಿ ಅನೇಕರು ಹೇಳುತ್ತಾರೆ. ಹಾಗಾಗಿ ನೆಲಗಡಲೆ ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆಯೇ?ಎಂಬ ಗೊಂದಲ ಹಲವರಲ್ಲಿದೆ. ಇದಕ್ಕೆ ತಜ್ಞರು ಏನು ಹೇಳುತ್ತಾರೆ ಎಂಬುದನ್ನು ತಿಳಿಯೋಣ.

ಯೋಗ ತರಬೇತುದಾರರೊಬ್ಬರು, ನೆಲಗಡಲೆ ಪೌಷ್ಟಿಕಾಂಶದ ನಿಧಿಯಾಗಿದೆ. ಇದನ್ನು ಸರಿಯಾದ ಪ್ರಮಾಣದಲ್ಲಿ ಸೇವಿಸಿದಾಗ, ಅವು ನಮ್ಮ ತೂಕವನ್ನು ನಿರ್ವಹಿಸುವಲ್ಲಿ ಪ್ರಯೋಜನಕಾರಿಯಾಗಿವೆ ಎಂದು ತಿಳಿಸಿದ್ದಾರೆ. ಹಾಗಾಗಿ ತೂಕ ಇಳಿಸಲು ಸಮತೋಲಿತ ಆಹಾರದ ಭಾಗವಾಗಿ ಇದನ್ನು ಸೇವಿಸಿದಾಗ ತೂಕ ನಷ್ಟ ಸಾಧ್ಯ ಎನ್ನಲಾಗಿದೆ.

ಹೆಲ್ತ್ ಟಿಪ್ಸ್

ನೆಲಗಡಲೆ ಆರೋಗ್ಯಕರ ಕೊಬ್ಬುಗಳು, ಪ್ರೋಟೀನ್ ಮತ್ತು ನಾರಿನಂಶದಿಂದ ಸಮೃದ್ಧವಾಗಿರುವ ಕಾರಣ ಇದು ಒಟ್ಟಾರೆ ಕ್ಯಾಲೊರಿ ಸೇವನೆಯನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ಅಲ್ಲದೇ ನೆಲಗಡಲೆ ಉತ್ತಮ ಕೊಬ್ಬನ್ನು ಹೊಂದಿರುತ್ತದೆ, ಇದು ಹೊಟ್ಟೆ ದೀರ್ಘಕಾಲ ತುಂಬಿರುವಂತೆ ಮಾಡುತ್ತದೆ. ಹಾಗೇ ಅತಿಯಾಗಿ ತಿನ್ನುವ ಬಯಕೆಗಳನ್ನು ಕಡಿಮೆ ಮಾಡುತ್ತದೆ.

ಹಾಗಾಗಿ ನೆಲಗಡಲೆಯಿಂದ ನಿಮ್ಮ ತೂಕ ಇಳಿಕೆಗೆ ಅನುಕೂಲವಾಗಲು ಸಕ್ಕರೆ ಮತ್ತು ಉಪ್ಪು ಮಿಶ್ರಿತ ನೆಲಗಡಲೆಗಳ ಬದಲು ಉಪ್ಪುರಹಿತ ಮತ್ತು ಸಕ್ಕರೆರಹಿತ ನೆಲಗಡಲೆಯನ್ನು ಆರಿಸಿ, ಹಾಗೇ ನೀವು ನೆಲಗಡಲೆಯನ್ನು ಬೇಯಿಸಿ ತಿನ್ನಬಹುದು ಅಥವಾ ನೆಲಗಡಲೆಯನ್ನು ಪೋಹಾ, ಉಪ್ಮಾ, ಚಟ್ನಿಗಳು ಮತ್ತು ಮನೆಯಲ್ಲಿ ತಯಾರಿಸಿದ ಆಹಾರಗಳಲ್ಲಿ ಸೇರಿಸಿಕೊಳ್ಳಬಹುದು.

## ಉದ್ಯಮಿ ಕಬೀರ್ ಜೊತೆಗಿನ ಡೇಟಿಂಗ್ ಸುದ್ದಿ ಸುಳ್ಳು ಎಂದ ಕೃತಿ ಸನೋನ್



ಬಾಲಿವುಡ್ ಬೆಡಗಿ ಕೃತಿ ಸನೋನ್ ಸಿನಿಮಾಗಿಂತ ಆಗಾಗ ವೈಯಕ್ತಿಕ ವಿಚಾರವಾಗಿ ಸುದ್ದಿಯಾಗುತ್ತಲೇ ಇರುತ್ತಾರೆ. ಇದೀಗ ಉದ್ಯಮಿ ಕಬೀರ್ ಬಹಿಯಾ ಜೊತೆಗಿನ ಡೇಟಿಂಗ್ ಬಗ್ಗೆ ನಟಿ ಪ್ರತಿಕ್ರಿಯೆ ನೀಡಿದ್ದಾರೆ. ಕಬೀರ್ ಜೊತೆಗಿನ ರಿಲೇಷನ್‌ಶಿಪ್ ಸುದ್ದಿ ಸುಳ್ಳು ಎಂದು ಕೃತಿ ಸನೋನ್ ಸ್ಪಷ್ಟನೆ ನೀಡಿದ್ದಾರೆ. ಸುಳ್ಳು ಸುದ್ದಿ ವೈರಲ್ ಆದಾಗ ನನಗೆ ಮಾತ್ರವಲ್ಲದೇ ನಮ್ಮ ಕುಟುಂಬಕ್ಕೂ ನೋವಾಗುತ್ತದೆ. ಒಬ್ಬರ ಬಗ್ಗೆ ಕಟ್ಟುಕಥೆ ಹರಡುವುದಕ್ಕೂ ಮುನ್ನ ನಿಜವೇನು ಎಂಬುದು ತಿಳಿದುಕೊಳ್ಳಬೇಕು. ಇಂತಹ ವಿಚಾರಗಳು ಸೋಷಿಯಲ್ ಮೀಡಿಯಾದಲ್ಲಿ ಬೇಗನೆ ವೈರಲ್ ಆಗುತ್ತದೆ. ಹೀಗೆ ಸುಳ್ಳು ಸುದ್ದಿ ಪ್ರತಿ ಬಾರಿ ಹಬ್ಬಿದಾಗ ಸ್ಪಷ್ಟನೆ ನೀಡುವುದು ಕಿರಿಕಿರಿ ಆಗುತ್ತದೆ. ಅದಕ್ಕಿಂತ ದೊಡ್ಡ ತಲೆನೋವು ಬೇರೊಂದಿಲ್ಲ ಎಂದು ಸಂದರ್ಶನವೊಂದರಲ್ಲಿ ಕೃತಿ ಸನೋನ್ ಮಾತನಾಡಿದ್ದಾರೆ. ಈ ಮೂಲಕ ಕಬೀರ್ ಜೊತೆಗಿನ ಡೇಟಿಂಗ್ ವಿಚಾರ ಸುಳ್ಳು ಎಂದು ಕ್ಲ್ಯಾರಿಟಿ ಕೊಟ್ಟಿದ್ದಾರೆ. ಇತ್ತೀಚೆಗೆ ತನಗಿಂತ 10 ವರ್ಷ ಕಿರಿಯನಾಗಿರುವ ಕಬೀರ್ ಜೊತೆ ಕೃತಿ ಸನೋನ್ ಗ್ರೀಸ್‌ನಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡಿದ್ದಾರೆ ಎನ್ನಲಾದ ಕೆಲ ಫೋಟೋಗಳು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಇಬ್ಬರ ಸಂಬಂಧದ ಬಗ್ಗೆ ಭಾರೀ ಚರ್ಚೆ ಶುರುವಾಗಿತ್ತು. ಈ ವಿಷ್ಯ ಕೃತಿ ಕಿವಿಗೂ ಬಿದ್ದಿದೆ. ಈ ಹಿನ್ನೆಲೆ ನಟಿ ಸ್ಪಷ್ಟನೆ ನೀಡುವ ಕೆಲಸ ಮಾಡಿದ್ದಾರೆ. ಅಂದಹಾಗೆ, 'ಕ್ರೀವ್' ಸಿನಿಮಾದ ಸಕ್ಸಸ್ ನಂತರ 'ಕಣ್ಣಪ್ಪ' ಸಿನಿಮಾದಲ್ಲಿ ಕೃತಿ ಸನೋನ್ ಕಾಣಿಸಿಕೊಳ್ಳಿದ್ದಾರೆ. ಬಾಲಿವುಡ್‌ನ ಹಲವು ಪ್ರಾಜೆಕ್ಟ್‌ಗಳು ನಟಿಯ ಕೈಯಲ್ಲಿವೆ.

## ಹಬ್ಬದ ಋತುವಿಗೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ವಿವಿಧ ಉತ್ಪನ್ನ ಅನಾವರಣಗೊಳಿಸಿದ ಗೋದ್ರೇಜ್ ಅಪ್ಲೈಯನ್ಸ್

ಗೋದ್ರೇಜ್ ಎಂಟರ್ಪ್ರೈಸಸ್ ಗ್ರೂಪ್ನ ಭಾಗವಾಗಿರುವ ಗೋದ್ರೇಜ್ ಆಂಡ್ ಬಾಯ್ಸ್‌ನ ಅಪ್ಲೈಯನ್ಸ್ ಬಿಸಿನೆಸ್, ಬೆಂಗಳೂರಿನ ಗ್ರಾಹಕರಿಗಾಗಿ ತನ್ನ ಮಳಿಗೆಗಳಲ್ಲಿ ಲಭ್ಯ ಇರುವ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ವ್ಯಾಪಕ ಶ್ರೇಣಿಯ ಉತ್ಪನ್ನಗಳನ್ನು ಅನಾವರಣಗೊಳಿಸಿದೆ. ಗ್ರಾಹಕರು ಈಗ ಹೆಚ್ಚು ತಂತ್ರಜ್ಞಾನ ವ್ಯಾಮೋಹಿಗಳಾಗಿದ್ದಾರೆ. ತಾವು ಖರೀದಿಸುವ ಸಾಧನ ಹಾಗೂ ಗೃಹೋಪಯೋಗಿ ಸಲಕರಣೆಗಳಲ್ಲಿ ಬುದ್ಧಿವಂತಿಕೆ ಅಳವಡಿಸಿರುವುದನ್ನು ಅವರು ಈಗ ಬಹುವಾಗಿ ಮೆಚ್ಚುತ್ತಾರೆ. ವಾಷಿಂಗ್ ಮಷಿನ್, ರೆಫ್ರಿಜರೇಟರ್ ಮತ್ತು ಏರ್ ಕಂಡೀಷನರ್ಗಳಿಗೆ ಸಂಬಂಧಿಸಿದಂತೆ ಗೋದ್ರೇಜ್ನ ಉಪಕರಣಗಳ ವಿಶಾಲ ಶ್ರೇಣಿಗಳಲ್ಲಿ ಅಂತರ್ ನಿರ್ಮಿತ ಬುದ್ಧಿವಂತಿಕೆ ಅಳವಡಿಸಲಾಗಿರುತ್ತದೆ. ಈ ಬುದ್ಧಿವಂತಿಕೆಯು ಬಳಕೆಯ ಮೇಲ್ವಿಚಾರಣೆ ಮಾಡುವುದರ ಜೊತೆಗೆ ಇತರ ಹಲವು ಕಾರ್ಯವೈಖರಿಗಳನ್ನೂ ಗಮನಿಸುತ್ತದೆ. ಸುತ್ತಮುತ್ತಲಿನ ಹವಾಮಾನ ಪರಿಸ್ಥಿತಿ, ರೆಫ್ರಿಜರೇಟರ್ನಲ್ಲಿ ಇರಿಸಿದ ಆಹಾರದ ಪ್ರಮಾಣ, ವಾಷಿಂಗ್ ಮಷಿನ್‌ಗೆ ಹಾಕುವ ಬಟ್ಟೆಯ ಪ್ರಮಾಣ ಮುಂತಾದ ವಿವರಗಳನ್ನು ಸಮರ್ಪಕವಾಗಿ ಗ್ರಹಿಸಿ ಅದಕ್ಕೆ ಅನುಗುಣವಾಗಿ ಗೃಹೋಪಯೋಗಿ ಸಲಕರಣೆಗಳ ಕಾರ್ಯಕ್ಷಮತೆಯನ್ನು ಸುಧಾರಿಸುತ್ತದೆ.




ಗ್ರಾಹಕರ ಬದಲಾದ ಪ್ರವೃತ್ತಿಗೆ ಅನುಗುಣವಾಗಿ ಕಂಪನಿಯು ಈಗ 400ಕ್ಕೂ ಹೆಚ್ಚು ಲೀಟರ್ನ ಫ್ರಾಸ್ಟ್ ಫ್ರೀ ರೆಫ್ರಿಜರೇಟರ್, ದೊಡ್ಡ 10 ಕೆಜಿ ಫ್ರಂಟ್ ಲೋಡ್ ವಾಷಿಂಗ್ ಮಷಿನ್ ಮತ್ತು 2.5 ಟಿಆರ್ ಏರ್ ಕಂಡೀಷನರ್ಗಳಂತಹ ಹೆಚ್ಚಿನ ಸಾಮರ್ಥ್ಯದ ಹೊಸ ಗೃಹೋಪಯೋಗಿ ಸಲಕರಣೆಗಳನ್ನು ಈಗ ತನ್ನ ವೈವಿಧ್ಯಮಯ ಉತ್ಪನ್ನಗಳ ಸಾಲಿಗೆ ಸೇರ್ಪಡೆ ಮಾಡಿದೆ. ಇಂಧನ ದಕ್ಷತೆಗೆ ಸಂಬಂಧಿಸಿದ ಕಂಪನಿಯ ಬದ್ಧತೆ ಪರಿಗಣಿಸಿದರೆ, ಭಾರತದ ಅತ್ಯಂತ ದಕ್ಷ ಕಾರ್ಯನಿರ್ವಹಣೆಯ, ವಿದ್ಯುತ್ ಮಿತವ್ಯಯದ ರೆಫ್ರಿಜರೇಟರ್ ಪರಿಚಯಿಸಿದೆ. ಇದು ವರ್ಷಕ್ಕೆ 100 ಯೂನಿಟ್ಗಿಂತ ಕಡಿಮೆ ವಿದ್ಯುತ್ ಬಳಸುತ್ತದೆ. ಗರಿಷ್ಠ ದಕ್ಷತೆಯ 5-ಸ್ಟಾರ್ ಏರ್ ಕಂಡಿಷನರ್ಗಳು, ಫ್ರಂಟ್ ಲೋಡ್ ವಾಷಿಂಗ್ ಮಷಿನ್ಗಳು ಮತ್ತು ಡೀಪ್ ಫ್ರೀಜರ್ಗಳನ್ನು ಸಹ ನೀಡುತ್ತದೆ. ಫ್ರಂಟ್ ಲೋಡ್ ವಾಷಿಂಗ್ ಮಷಿನ್ಗಳ ಖರೀದಿಗೆ ಕಂಪನಿಯು ವಿಶೇಷ ಕೊಡುಗೆಗಳನ್ನು ಪರಿಚಯಿಸಿದೆ. ಉದ್ಯಮದ ಪಾಲಿಗೆ ಸ್ವಾತಂತ್ರ್ಯ ದಿನದ ವಾರದಿಂದ ಹಬ್ಬದ ಋತು ಪ್ರಾರಂಭವಾಗುತ್ತವೆ. ವಿಸ್ತೃತ ವಾರಂಟಿಯಿಂದ ಹಿಡಿದು ನಗದು ವಾಪಸ್ (ಕ್ಯಾಷ್ಬ್ಯಾಕ್) ಮತ್ತು ಸುಲಭದ ಮಾಸಿಕ ಸಮಾನ ಕಂತು (ಇಎಂಐ) ಮತ್ತಿತರ ಕೊಡುಗೆಗಳನ್ನು ಗ್ರಾಹಕರು ಕಂಪನಿಯಿಂದ ನಿರೀಕ್ಷಿಸಬಹುದು. ಮುಂಬರುವ ಹಬ್ಬದ ಋತುವಿನ ಕುರಿತು ಪ್ರತಿಕ್ರಿಯಿಸಿರುವ ಗೋದ್ರೇಜ್ ಅಪ್ಲೈಯನ್ಸ್‌ನ ವಹಿವಾಟು ಮುಖ್ಯಸ್ಥ ಮತ್ತು ಕಾರ್ಯನಿರ್ವಾಹಕ ಉಪಾಧ್ಯಕ್ಷ ಕಮಲ್ ನಂದಿ ಅವರು, ದಕ್ಷಿಣ ಭಾರತದಲ್ಲಿನ ಉದ್ಯಮಕ್ಕೆ ಬೇಸಿಗೆ ಋತುವು ಉತ್ತಮ ಆರಂಭ ಒದಗಿಸಿದ್ದು, ನಮ್ಮ ಪ್ರೀಮಿಯಂ ಉತ್ಪನ್ನಗಳ ಶ್ರೇಣಿಗೆ - ಹೆಚ್ಚಿನ ಸಾಮರ್ಥ್ಯ, ಜಾಣ ತಂತ್ರಜ್ಞಾನಗಳ ಉತ್ಪನ್ನಗಳನ್ನು ಹೊಸದಾಗಿ ಸೇರ್ಪಡೆ ಮಾಡುವುದರ ಜೊತೆಗೆ ಹಲವಾರು ಆಕರ್ಷಕ ಉತ್ತೇಜಕ ಕೊಡುಗೆಗಳನ್ನೂ ನೀಡಲಾಗುತ್ತಿದೆ. ಬೇಸಿಗೆಯ ತ್ರೈಮಾಸಿಕದಲ್ಲಿ ದಾಖಲಿಸಿರುವ ಶೇ 40ರಷ್ಟರ ವಹಿವಾಟಿನ ಬೆಳವಣಿಗೆಯು ಮುಂಬರುವ ಹಬ್ಬದ ಋತುವಿನಲ್ಲಿಯೂ ಪುನರಾವರ್ತನೆ ಆಗಲಿದೆ ಎಂಬುದು ನಮ್ಮ ದೃಢ ನಂಬಿಕೆಯಾಗಿದೆ. ಕಾರ್ಯಕ್ಷಮತೆಯ ಗರಿಷ್ಠ ಬಳಕೆ ಮತ್ತು ಹೆಚ್ಚುವರಿ ಅನುಕೂಲತೆಗಳನ್ನು ಸೇರ್ಪಡೆ ಮಾಡುವ ಕೃತಕ ಬುದ್ಧಿವಂತಿಕೆ (ಎಐ) ತಂತ್ರಜ್ಞಾನ ನೆರವಿನಿಂದ ಭಾರತದಲ್ಲಿಯೇ ತಯಾರಿಸಿರುವ ವ್ಯಾಪಕವಾದ ಉತ್ಪನ್ನ ಶ್ರೇಣಿ ಪರಿಚಯಿಸಲು ನಮಗೆ ಸಂತಸವಾಗುತ್ತಿದೆ ಎಂದು ಹೇಳಿದ್ದಾರೆ.

## ಮನಸ್ಸಿಗೆ ಆಹ್ಲಾದಕರ ಅನುಭವ ನೀಡುತ್ತೆ ಪರ್ಫ್ಯೂಮ್

### ಬ್ಯೂಟಿ ಟಿಪ್ಸ್



ಪರ್ಫ್ಯೂಮ್ ಮನಸ್ಸಿಗೆ ಮುದ ನೀಡುತ್ತದೆ ನಿಜ. ಆದರೆ ಅದರ ಆಯ್ಕೆ, ಬಳಕೆ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಂಡಿರಬೇಕು. ಪರ್ಫ್ಯೂಮ್ ಕೆಲವೊಮ್ಮೆ ಒಳ್ಳೆಯ ಸುವಾಸನೆಯಿಂದ ಕೂಡಿದ್ದರೆ, ಮತ್ತೆ ಕೆಲವೊಮ್ಮೆ ಅವುಗಳ ವಾಸನೆ ಬೇಸರ ತರಿಸುವಷ್ಟು ಕೆಟ್ಟದಾಗಿರುತ್ತದೆ, ಅಕ್ಕ ಪಕ್ಕದವರಿಗೂ ಈ ಕೆಟ್ಟ ವಾಸನೆಯಿಂದ ಕಿರಿಕಿರಿಯಾಗುತ್ತದೆ. ಇದಕ್ಕೆ ಕಾರಣ ಪರ್ಫ್ಯೂಮ್ ಬಳಕೆಯಲ್ಲಿನ ವ್ಯತ್ಯಾಸ. ಬೀದಿ ಬದಿಯಲ್ಲಿ ಮಾರುವ ಕಡಿಮೆ ಬೆಲೆಯ ಗುಣಮಟ್ಟವಿಲ್ಲದ ಕಳಪೆ ಅಂಶಗಳನ್ನೊಳಗೊಂಡ ಸುಗಂಧ ದ್ರವ್ಯ ಬರೀ ದುರ್ಗಂಧವನ್ನು ಹೊರ ಸೂಸುತ್ತವೆ. ಆದ್ದರಿಂದ ನಿಮ್ಮ ಅನುಕೂಲಕ್ಕೆ ತಕ್ಕಂತಹ ಒಳ್ಳೆ ಸುವಾಸನೆ ಬೀರುವ ಸುಗಂಧ ದ್ರವ್ಯ ಬಳಸಿದರೆ ಹಿತವಾಗಿರುತ್ತದೆ. ಸ್ನಾನ ಮುಗಿಸಿಕೊಂಡು ಫ್ರೆಶ್ ಆದ ಬಳಿಕ ದೇಹಕ್ಕೆ ಡಿಓಡರೆಂಟ್ ಸಿಂಪಡಿಸಿಕೊಳ್ಳಬೇಕು. ಡ್ರೈ ಸ್ಕಿನ್ ಗೆ ಡಿಓಡರೆಂಟ್ ಹಾಕುವ ಬದಲು ಫ್ರೆಶ್ ಆದ ನಂತರ ಉಪಯೋಗಿಸುವುದು ಒಳಿತು. ಸಭೆ, ಸಮಾರಂಭಗಳಿಗೆ ಅಥವಾ ಕಛೇರಿಗಳಿಗೆ ಹೋಗುವ ಮೊದಲು ನೀವು ಧರಿಸುವ ವಸ್ತ್ರಗಳಿಗೆ ಪರ್ಫ್ಯೂಮ್ ಹಾಕಿಡಿ.



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

## ರಾಶಿ ಭವಿಷ್ಯ

**ಮೇಷ:** ಹಣ ಬಂದರೂ ಉಳಿಯುವುದಿಲ್ಲ, ಸುಖ ಭೋಜನ, ಶತ್ರು ನಾಶ, ವಿದ್ಯಾಭ್ಯಾಸದಲ್ಲಿ ಆಸಕ್ತಿ, ಮಾನಸಿಕ ನೆಮ್ಮದಿ.

**ವೃಷಭ:** ಸಾಲದಿಂದ ಮುಕ್ತಿ, ದಂಡ ಕಟ್ಟುವಿರಿ, ಗೆಳೆಯರ ಕಷ್ಟದಲ್ಲಿ ಭಾಗಿ, ತೀರ್ಥಯಾತ್ರೆ ದರ್ಶನ.

**ಮಿಥುನ:** ಆಲಸ್ಯ ಮನೋಭಾವ, ಶ್ರಮಕ್ಕೆ ತಕ್ಕ ಫಲ, ದೇವತಾ ಕಾರ್ಯಗಳಲ್ಲಿ ಭಾಗಿ, ನೌಕರಿಯಲ್ಲಿ ಹೆಚ್ಚಿನ ಜವಾಬ್ದಾರಿ.

**ಕಟಕ:** ಸಾಧಾರಣ ಲಾಭ, ಅವಾಚ್ಯ ಶಬ್ದಗಳಿಂದ ನಿಂದನೆ, ಪತಿ ಪತ್ನಿಯರಲ್ಲಿ ವಿರಸ, ಅಪರಾಧ

**ಸಿಂಹ:** ಸ್ತ್ರೀಯರು ತಾಳ್ಮೆಯಿಂದ ವರ್ತಿಸಿ, ಹಣಕಾಸಿನ ಮುಗ್ಗಟ್ಟು, ಮನೋವ್ಯಥೆ, ಮಾತಾಪಿತರಲ್ಲಿ ಪ್ರೀತಿ.

**ಕನ್ಯಾ:** ಸೌಜನ್ಯದಿಂದ ಇರಿ, ಮಕ್ಕಳಿಂದ ನೆಮ್ಮದಿ, ಅಕಾಲ ಭೋಜನ, ವಿವಾಹ ಯೋಗ, ನಾನಾ ರೀತಿಯ ಚಿಂತೆ.

**ತುಲಾ:** ಆಹಾರ ಸೇವನೆಯಲ್ಲಿ ವ್ಯತ್ಯಾಸ, ಸಾಲ ಕಟ್ಟುವ ಸಾಧ್ಯತೆ, ಕುತಂತ್ರದಿಂದ ಹಣ ಸಂಪಾದನೆ.

**ವೃಶ್ಚಿಕ:** ಅತಿಯಾದ ಭಯ, ವಾದ ವಿವಾದಗಳಲ್ಲಿ ಸೋಲು, ದೂರ ಪ್ರಯಾಣ, ವ್ಯಾಪಾರ ವ್ಯವಹಾರಗಳಲ್ಲಿ ಲಾಭ.

**ಧನಸ್ಸು:** ಮನಸ್ಸಿನಲ್ಲಿ ಗೊಂದಲ, ಪರಸ್ತ್ರಿಯಿಂದ ತೊಂದರೆ, ಕಲಹ ಸಂಭವ, ನಿಮ್ಮ ಮಾತುಗಳಿಂದ ಅನರ್ಥ.

**ಮಕರ:** ಅಧಿಕ ತಿರುಗಾಟ, ಇಷ್ಟ ವಸ್ತುಗಳ ಖರೀದಿ, ಸರ್ಕಾರಿ ಕೆಲಸಗಳಲ್ಲಿ ಜಯ, ಪಿತ್ರಾರ್ಜಿತ ಆಸ್ತಿಗಳಿಕೆ, ಮಿಶ್ರ ಫಲ.

**ಕುಂಭ:** ವಾಹನ ಚಾಲಕರಿಗೆ ತೊಂದರೆ, ಮಾತೃವಿನಿಂದ ಶುಭ ಹಾರೈಕೆ, ಧನಸಹಾಯ, ಪ್ರಿಯ ಜನರ ಭೇಟಿ.

**ಮೀನ:** ಮಾನಸಿಕ ಒತ್ತಡ, ಪಾಲುದಾರಿಕೆ ಮಾತುಕತೆ, ಉದ್ಯೋಗ ಅವಕಾಶ, ಅನ್ಯ ಜನರಲ್ಲಿ ಪ್ರೀತಿ.

## ವರ್ಲ್ಡ್ ಗ್ರೇಟ್ನೆಸ್ ಡೇ

ವರ್ಲ್ಡ್ ಗ್ರೇಟ್ನೆಸ್ ಡೇ ಅನ್ನು ವಾರ್ಷಿಕವಾಗಿ ಆಗಸ್ಟ್ 15 ರಂದು ಆಚರಿಸಲಾಗುತ್ತದೆ. ಪ್ರೊಫೆಸರ್ ಪ್ಯಾಟ್ರಿಕ್ ಬುಸಿಂಗೇ ಈ ಹಬ್ಬವನ್ನು ಜೀವನದಲ್ಲಿ ಎಲ್ಲಾ ಮಹತ್ತರವಾದ ವಿಷಯಗಳನ್ನು ಗೌರವಿಸಲು ಸ್ಥಾಪಿಸಿದರು. ಈ ದಿನವು ನಮ್ಮ ಜೀವನದಲ್ಲಿ ಮಹತ್ವದ ಪ್ರಭಾವ ಬೀರಿದ ವ್ಯಕ್ತಿಗಳಿಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಅದು ಪೋಷಕರಾಗಿರಲಿ, ಸ್ನೇಹಿತರಾಗಿರಲಿ ಅಥವಾ ಪಾಲಿಸಬೇಕಾದ ಸಾಕುಪ್ರಾಣಿಯಾಗಿರಲಿ, ಆ ಜನರನ್ನು ಗೌರವಿಸಲು ಮತ್ತು ಧನ್ಯವಾದ ಸಲ್ಲಿಸಲು ಇದು ನಮ್ಮ ಕ್ಷಣವಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಇದು ನಿಮ್ಮ ಸ್ವಂತ ಪ್ರತಿಭೆಯ ಬಗ್ಗೆ ಯೋಚಿಸುವ ದಿನವಾಗಿದೆ. ಪ್ರತಿಯೊಬ್ಬರೂ ಶ್ರೇಷ್ಠತೆಗೆ ಸಮರ್ಥರಾಗಿದ್ದಾರೆ ಮತ್ತು ಆ ಶ್ರೇಷ್ಠತೆಯನ್ನು ಪ್ರಪಂಚದ ಇತರರೊಂದಿಗೆ ಹಂಚಿಕೊಳ್ಳಲು ಆತ್ಮವಿಶ್ವಾಸ ಮತ್ತು ಸ್ವಾಭಿಮಾನವನ್ನು ಬೆಳೆಸುವುದು ನಿರ್ಣಾಯಕವಾಗಿದೆ ಎಂದು ಬುಸಿಂಗೆ ನಂಬುತ್ತಾರೆ. ಗ್ರೇಟ್ನೆಸ್ ಕೋಡ್ ನ ಲೇಖಕ ಡಾ. ಪ್ಯಾಟ್ರಿಕ್ ಬ್ಯುಸಿಂಗೆ ನಿಮ್ಮ ಜೀವನದಲ್ಲಿ ಶ್ರೇಷ್ಠ ವ್ಯಕ್ತಿಗಳಿಗೆ ನಿಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುವ ಮಾರ್ಗವಾಗಿ ಈ ರಜಾದಿನವನ್ನು ಪ್ರಾರಂಭಿಸಿದರು. ಜನರು, ವ್ಯಾಪಾರಗಳು, ಸ್ಥಳಗಳು, ಸಾಕುಪ್ರಾಣಿಗಳು ಮತ್ತು ನಿಮ್ಮ ಜೀವನದಲ್ಲಿ ಯಾವುದನ್ನಾದರೂ ಆಚರಿಸಲು ಇದು ಒಂದು ದಿನವಾಗಿದೆ. ಈ ದಿನವು ಜನರು ತಮ್ಮೊಳಗಿನ ಶ್ರೇಷ್ಠತೆಯನ್ನು ಬೆಳೆಸಿಕೊಳ್ಳಲು ಅಥವಾ ಅನ್ವೇಷಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ. ಯುನೈಟೆಡ್ ಕಿಂಗ್ಡಮ್, ಯುರೋಪ್, ಆಫ್ರಿಕಾ ಮತ್ತು ಉತ್ತರ ಅಮೇರಿಕಾದಾದ್ಯಂತ 50,000 ಕ್ಕೂ ಹೆಚ್ಚು ಜನರಿಗೆ ಕಲಿಸಿದ ಪ್ರಾಧ್ಯಾಪಕ ಡಾ. ಬುಸಿಂಗೆ. ಅವರು ಏಳು ವಿಶ್ವವಿದ್ಯಾನಿಲಯಗಳಿಂದ ಹತ್ತು ಸ್ನಾತಕೋತ್ತರ ಅರ್ಹತೆಗಳನ್ನು ಪಡೆದುಕೊಂಡಿದ್ದಾರೆ ಮತ್ತು ನಿರಂತರವಾಗಿ ತಮ್ಮನ್ನು ತಾವು ಸುಧಾರಿಸಿಕೊಳ್ಳುತ್ತಿದ್ದಾರೆ.

ಡಾ. ಪ್ಯಾಟ್ರಿಕ್ ಬ್ಯುಸಿಂಗೆ ಅವರ ನಂಬಿಕೆಗಳನ್ನು ಜಾರಿಗೊಳಿಸಲು ಸಹಾಯ ಮಾಡಲು ಗ್ರೇಟ್ನೆಸ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು. ಈ ವಿಶ್ವವಿದ್ಯಾಲಯವು ಅಂತಹ ಒಂದು. ಪ್ರತಿಯೊಬ್ಬರಲ್ಲೂ ಶ್ರೇಷ್ಠತೆ ಇರುತ್ತದೆ ಮತ್ತು ಈ ಶ್ರೇಷ್ಠತೆಯು ಹೆಜ್ಜೆಗುರುತುಗಳನ್ನು ಬಿಡಬಹುದು ಎಂಬುದು ಇದರ ಮೂಲ ನಂಬಿಕೆ. ಈ ಸಂಸ್ಥೆಯು ಜನರಲ್ಲಿರುವ ಶ್ರೇಷ್ಠತೆಯನ್ನು ಪತ್ತೆಹಚ್ಚಲು ಮತ್ತು ಅಭಿವೃದ್ಧಿಪಡಿಸಲು ಮತ್ತು ಆ ಶ್ರೇಷ್ಠತೆಯನ್ನು ಯಶಸ್ಸಿಗೆ ಭಾಷಾಂತರಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ. ಅವರು ಇದನ್ನು 'ಗ್ರೇಟ್ನೈಸೇಶನ್' ಎಂದು ಕರೆಯುವ ಪ್ರಕ್ರಿಯೆಯ ಮೂಲಕ ಮಾಡುತ್ತಾರೆ, ಇದರಲ್ಲಿ ಅವರು ತಮ್ಮ ಶ್ರೇಷ್ಠತೆಯನ್ನು ಕಂಡುಹಿಡಿಯಲು ಮತ್ತು ಅಧಿಕೃತವಾಗಿ ಮೂರು ಹಂತಗಳಲ್ಲಿ ಅವರನ್ನು ಶ್ರೇಷ್ಠವೆಂದು ಘೋಷಿಸಲು ಸಹಾಯ ಮಾಡುತ್ತಾರೆ. ಈ ಮಹಾನ್ ವ್ಯಕ್ತಿಗಳ ಹೆಸರುಗಳನ್ನು ವರ್ಲ್ಡ್ ಬುಕ್ ಆಫ್ ಗ್ರೇಟ್ನೆಸ್ ಎಂಬ ವಾರ್ಷಿಕ ಪ್ರಕಟಣೆಯಲ್ಲಿ ದಾಖಲಿಸಲಾಗಿದೆ. ವಿಶ್ವವಿದ್ಯಾನಿಲಯವು ಜನರಿಗೆ ಶ್ರೇಷ್ಠತೆಯ ಬಗ್ಗೆ ಕಲಿಸಲು ಮತ್ತು ಅದನ್ನು ಕಂಡುಹಿಡಿಯಲು ಅವರಿಗೆ ಸಹಾಯ ಮಾಡಲು ಮೀಸಲಾಗಿರುವ ಅನೇಕ ಪ್ರಕಟಣೆಗಳನ್ನು ಹೊಂದಿದೆ, ಉದಾಹರಣೆಗೆ ಗ್ರೇಟ್ನೆಸ್ ಕೋಡ್, ಬಿಯೆಟ್ಯೂಡ್ಸ್ ಆಫ್ ಗ್ರೇಟ್ನೆಸ್, ಮತ್ತು ಲೆಸ್ ಬ್ರೌನ್ ನಮ್ಮ ಜೀವನವನ್ನು ಬದಲಾಯಿಸಿದೆ. ಸಂಸ್ಥೆಯು ಡಾ. ಬ್ಯುಸ್ನೇಜ್ನೊಂದಿಗೆ ನಿರಂತರವಾಗಿ 'ಶ್ರೇಷ್ಠತೆಯನ್ನು' ನೀಡುತ್ತದೆ ಮತ್ತು ನಿಮ್ಮ ಶ್ರೇಷ್ಠತೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

# ಪ್ರವಾಸಿಗರಿಗೆ ವರ್ಧಿತ ಸೇವೆ: ಈಶ್ವರ ಖಂಡ್ರೆ

**ಮೈಸೂರು:** ಮೈಸೂರಿನ ಪ್ರಮುಖ ಪ್ರವಾಸಿ ತಾಣವಾಗಿರುವ ಚಾಮರಾಜೇಂದ್ರ ಮೃಗಾಲಯಕ್ಕೆ ಪ್ರಾಣಿ, ಪಕ್ಷಿಗಳ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರಿಗೆ ವರ್ಧಿತ ಸೇವೆಗಳನ್ನು ನೀಡಲು ಸರ್ಕಾರ ಕ್ರಮಕ್ಕೈಗೊಂಡಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಪ್ರವಾಸಿಗರಿಗಾಗಿ ನಿರ್ಮಿಸಿರುವ ಲಗೇಜು ಕೊಠಡಿ ಮತ್ತು ಹುಲಿ ಮನೆಯ ವೀಕ್ಷಣಾ ಗ್ಯಾಲರಿ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಮೃಗಾಲಯ ವಿಶ್ವದಲ್ಲೇ ಅತ್ಯಂತ ಜನಪ್ರಿಯ ಮೃಗಾಲಯಗಳಲ್ಲಿ ಒಂದಾಗಿದೆ. ಪ್ರತಿ 4 ವರ್ಷಕ್ಕೊಮ್ಮೆ ಕೇಂದ್ರೀಯ ಮೃಗಾಲಯ ಪ್ರಾಧಿಕಾರ ನಡೆಸುವ ಸಾಮರ್ಥ್ಯ ನಿರ್ವಹಣಾ ಮೌಲ್ಯೀಕರಣದ ಪ್ರಕಾರ ಭಾರತದ ಮೃಗಾಲಯಗಳ ಶ್ರೇಣೀಕರಣದಲ್ಲಿ ಶ್ರೀ ಚಾಮರಾಜೇಂದ್ರ ಮೃಗಾಲಯ 2ನೇ ಸ್ಥಾನದಲ್ಲಿದ್ದು, ಚೆನ್ನೈ ಅರಿಜ್ಞರ್ ಅಣ್ಣ ಮೃಗಾಲಯ ಮೊದಲ ಸ್ಥಾನದಲ್ಲಿದೆ ಎಂದು ಮಾಹಿತಿ ನೀಡಿದರು.



ಮೃಗಾಲಯಕ್ಕೆ ಬರುವ ಪ್ರವಾಸಿಗರು ತಮ್ಮ ಲಗೇಜು ಹೊತ್ತು ಮೃಗಾಲಯ ವೀಕ್ಷಣೆ ಮಾಡುವುದು ಕಷ್ಟಕರವಾಗಿದೆ. ಹೀಗಾಗಿ ಪ್ರವಾಸಿಗರಿಗೆ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸಲು ಪ್ರವಾಸಿಗರು ಮತ್ತು ಸಂದರ್ಶಕರ ಅನುಕೂಲಕ್ಕಾಗಿ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಲಗ್ಗೇಜು ಕೊಠಡಿ ಮಾಡಲಾಗಿದೆ. ಈ ನಡುವೆ ಮೃಗಾಲಯದಲ್ಲಿರುವ ಹುಲಿ ಮನೆಗಳಲ್ಲಿ ಪ್ರವಾಸಿಗರು ಹುಲಿಗಳನ್ನು ವೀಕ್ಷಿಸಲು ಇನ್ನಷ್ಟು ಸುಲಭವಾಗುವಂತೆ ವೀಕ್ಷಣಾ ಗ್ಯಾಲರಿ ನಿರ್ಮಿಸಲಾಗಿದೆ. ಇದಕ್ಕಾಗಿ ಎತ್ತರದ ದಿಬ್ಬ ನಿರ್ಮಿಸಿದ್ದು, ಗಾಜಿನೊಳಗಿನಿಂದ ಹುಲಿಗಳ ವೀಕ್ಷಣೆ ಮಾಡಬಹುದು ಎಂದರು.

> **“ ವಿಶ್ವ ವಿಖ್ಯಾತ ದಸರಾ ಜಂಬೂ ಸವಾರಿಯಲ್ಲಿ ಪ್ರಧಾನ ಆಕರ್ಷಣೆಯಾದ ಆನೆಗಳನ್ನು ಸಾಂಪ್ರದಾಯಿಕವಾಗಿ ಕಾಡಿನಿಂದ ನಾಡಿಗೆ ಬೀಳ್ಕೊಡಲು ಆ.21ರಂದು ವೀರನಹೊಸಳ್ಳಿಯಲ್ಲಿ ವಿಧ್ಯುಕ್ತವಾಗಿ ಗಜಪಯಣ ಆಯೋಜಿಸಲಾಗಿದೆ.**
> **-ಈಶ್ವರ ಖಂಡ್ರೆ,** ಅರಣ್ಯ ಸಚಿವ

ಮೈಸೂರು ಹೊರವಲಯದ ಕೂರ್ಗಳ್ಳಿಯಲ್ಲಿ ನಾಲ್ಕು ವನ್ಯಜೀವಿ ರಕ್ಷಣಾ ವಿಭಾಗಗಳಿದ್ದು, ಇತ್ತೀಚೆಗೆ ಮತ್ತೆ 2 ವಿಭಾಗಕ್ಕೆ ಅನುಮೋದನೆ ನೀಡಲಾಗಿದೆ. ಇಲ್ಲಿ ಗಾಯಗೊಂಡ ಅಥವಾ ಗ್ರಾಮಕ್ಕೆ ನುಗ್ಗಿ ಮಾನವ? ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗಿ ಸೆರೆ ಹಿಡಿದ 8 ಹುಲಿ ಅಥವಾ ಚಿರತೆಗಳನ್ನು ಇಲ್ಲಿ ಸಂರಕ್ಷಿಸಬಹುದಾಗಿದೆ. ಇದರ ಜತೆಗೆ ಕಾಡಿನಲ್ಲಿ ತಾಯಿಯಿಂದ ಬೇರ್ಪಟ್ಟ ಆನೆ ಮರಿಗಳ ಪೋಷಣೆ ಮಾಡಲು ಕೂರ್ಗಳ್ಳಿಯಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದ್ದು, 2 ಆನೆ ಮರಿ ಮತ್ತು 3 ದೊಡ್ಡ ಆನೆಗಳಿದ್ದು, ಇವುಗಳಿಗಾಗಿಯೇ ವಿಶೇಷವಾಗಿ ಈಜುಕೊಳ ವಿನ್ಯಾಸಗೊಳಿಸಲಾಗಿದೆ ಎಂದರು.

# ಧರ್ಮರಾಯ ಸ್ವಾಮಿ ಸಮುದಾಯ ಭವನಕ್ಕೆ ನೆರವು

**ಕೋಲಾರ:** ನಗರದ ಕಾರಂಜಿ ಕಟ್ಟೆಯಲ್ಲಿರುವ ತಿಗಳ ಜನಾಂಗದ ಶ್ರೀ ಧರ್ಮರಾಯ ಸ್ವಾಮಿ ಸಮುದಾಯ ಭವನಕ್ಕೆ ಅಗತ್ಯವಾಗಿದ್ದ ಜನರೇಟರ್ ಖರೀದಿಗೆ ಸಮಾಜ ಸೇವಕ ಎ.ಶ್ರೀನಿವಾಸ್ ರವರಿಂದ ಎಂಟು ಲಕ್ಷ ರೂಪಾಯಿಗಳ ಆರ್ಥಿಕ ನೆರವನ್ನು ಚೆಕ್ ಮೂಲಕ ಎ. ಶ್ರೀನಿವಾಸ್ ಯುವ ಬ್ರಿಗೇಡ್ ನ ಮುಖಂಡರುಗಳ ಮೂಲಕ ದೇವಾಲಯದ ಗೌಡರಿಗೆ ಬುಧವಾರ ತಲುಪಿಸಿದರು. ಈ ಸಂಧರ್ಭದಲ್ಲಿ ಮಾತನಾಡಿದ ತಿಗಳ ಸಮುದಾಯದ ಮುಖಂಡ ಫಾಲ್ಗುಣರವರು ಸಮುದಾಯದ ಶ್ರೀ ಧರ್ಮರಾಯ ಸ್ವಾಮಿ ಸಮುದಾಯ ಭವನ ಶೀಘ್ರದಲ್ಲೇ ಉದ್ಘಾಟನೆ ನೆರವೇರಲಿದ್ದು,ನಮ್ಮ ಸಮುದಾಯ ಭವನಕ್ಕೆ ಅಗತ್ಯವಾದ ಜನರೇಟರ್ ನ್ನು ನಮ್ಮ ಸಮುದಾಯದವರೇ ಆದ ಎ.ಶ್ರೀನಿವಾಸ್ ಆರ್ಥಿಕ ಸಹಾಯ ನೀಡಿ ಸೇವೆ ಸಲ್ಲಿಸಿರುವುದು ಸಂತೋಷ ತಂದಿದೆ ಶ್ರೀನಿವಾಸ್ ರವರುಈಗಾಗಲೇ ಬಹಳಷ್ಟು ಸಮುದಾಯಗಳಿಗೆ ಹಾಗೂ ಆಟೋ ನಿಲ್ದಾಣಗಳನ್ನು ನಿರ್ಮಾಣ ಸಹಾಯ ಮಾಡಿದ್ದು, ಬಡ ಜನತೆಗೆ ತಮ್ಮ ಕೈಲಾದ ಆರ್ಥಿಕ ನೆರವು ನೀಡುತ್ತಾ ಬರುತ್ತಿದ್ದು, ಅವರು ಮಾಡುತ್ತಿರುವ ಸಮಾಜ ಸೇವೆ ಇನ್ನಷ್ಟು ಮುಂದುವರೆಯಲಿ ಎಂದು ಆಶಿಸಿದರು. ಎ.ಶ್ರೀನಿವಾಸ್ ಯುವ ಬ್ರಿಗೇಡ್ ನ ಮುಖಂಡರುಗಳಾದ ಅರ್ಬನ್ ಬ್ಯಾಂಕ್ ನಿರ್ದೇಶಕ ಸುರೇಶ್,ಜಿಯಾಉಲ್ಲಾಖಾನ್,ಗಂಗಾಧರ್,ಕಾರ್ತಿಕ್,ಅನಿಲ್,ಸೈಯದ್ ,ಮಹಮ್ಮದ್ ಆರೀಫ್,ಅರುಣ್ ಕುಮಾರ್,ಮಿರ್ಜಾ, ಉಪಸ್ಥಿತರಿದ್ದರು.

# ಯುವಶಕ್ತಿ ದೇಶದ ಅಭಿವೃದ್ಧಿಗೆ ಪ್ರಮುಖ ಪಾತ್ರ: ಎಂ ಆರ್ ಸುಮತಿ

**ಚಾಮರಾಜನಗರ:** ಪ್ರತಿಯೊಬ್ಬ ವಿದ್ಯಾರ್ಥಿಗಳು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಎಂದು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ ಎಂ ಆರ್ ಸುಮತಿ ತಿಳಿಸಿದರು.

ನಗರದ ಜೋಡಿ ರಸ್ತೆಯಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ. ಭಾರತ ಸರ್ಕಾರದ ನೆಹರು ಯುವ ಕೇಂದ್ರ. ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ.ಶ್ರೀ ವರಮಹಾಲಕ್ಷ್ಮಿ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ ಸಂಯುಕ್ತ ಆಶ್ರಯದಲ್ಲಿ ಸ್ವಾತಂತ್ರ ದಿನಾಚರಣೆ ಪ್ರಯುಕ್ತ ಹರ್ ಘರ್ ತಿರಂಗ. ಅಭಿಯಾನ. ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಭಾರತದ ಧ್ವಜ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಲಾಯಿತು. ಹಾಗೂ ಯುವಕ ಯುವತಿಯರು ಪ್ರತಿ ರಾಷ್ಟ್ರದ ಶಕ್ತಿ ಯಾಗಿರುತ್ತಾರೆ. ಮತ್ತು ಯುವಶಕ್ತಿಯ ಸಮಾಜ ಮತ್ತು ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಕೊಡುಗೆ ಯನ್ನು ನೀಡುವಲ್ಲಿ ಪಾತ್ರವನ್ನು ವಹಿಸುತ್ತಿದೆ. ಆದ್ದರಿಂದ ಉತ್ತಮ ಶಿಕ್ಷಣ ಕಲಿತು ವಿದ್ಯಾರ್ಥಿಗಳು ತಮ್ಮ ಭವಿಷ್ಯ ಉಜ್ವಲ ಮಾಡಿಕೊಳ್ಳಬೇಕು. ಎಂದು ಕರೆ ನೀಡಿದರು. ನನ್ನ ದೇಶವನ್ನು ಮಾದಕ ವಸ್ತುಗಳ ಮುಕ್ತಗೊಳಿಸಲು ನನ್ನ ಕೈಲಾದಷ್ಟು ಸಾಧ್ಯ ಇರುವ ಎಲ್ಲಾ ಪ್ರಯತ್ನ ಮಾಡುತ್ತೇನೆ ಎಂದು ವಿದ್ಯಾರ್ಥಿಗಳು ಪ್ರತಿಜ್ಞೆ ವಿಧಿ ಸ್ವೀಕರಿಸಿದ್ದರು.

ಶ್ರೀ ವರಮಹಾಲಕ್ಷ್ಮಿ ಸಾಂಸ್ಕೃತಿಕ ಕ್ರೀಡಾ ಸೇವಾ ಸಂಸ್ಥೆ ಅಧ್ಯಕ್ಷ ಜಿ ಬಂಗಾರು ಮಾತನಾಡಿ. ವಿದ್ಯಾರ್ಥಿಗಳು ಈ ದೇಶದ ಸಂಪತ್ತು. ಆದ್ದರಿಂದ ಭವ್ಯ ಭಾರತ ನಿರ್ಮಾಣ ಮಾಡಲು. ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳ ಮುಂದೆ ರಾಷ್ಟ್ರಧ್ವಜ. ಆರಿಸಬೇಕು. ನಂತರ ನಿಗದಿತ ಸಮಯದಲ್ಲಿ ಇಳಿಸಬೇಕು. ಈ ಬಗ್ಗೆ ಪೋಷಕರಿಗೆ ಅರಿವು ಮೂಡಿಸಬೇಕು. ಎಂದು ಕರೆ ನೀಡಿದರು. ವಿಶೇಷವಾಗಿ ಸರ್ಕಾರಿ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಕಲಿತು ಉನ್ನತ ಮಠದ ಅಧಿಕಾರಿಗಳಾಗಿ ಸೇವೆ ಮಾಡುತ್ತಿರುವುದು ಮೆಚ್ಚುಗೆ ವಿಷಯ ಎಂದು ಅಭಿಪ್ರಾಯಪಟ್ಟರು.

ಭಾರತ ಸರ್ಕಾರದ ನೆಹರು ಯುವ ಕೇಂದ್ರದ ಸಹನಾ, ಎನ್ ಎನ್, ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರಾದ. ಎಂ ಆರ್ ಬಾಲಸುಬ್ರಹ್ಮಣ್ಯಂ. ಡಾ, ಬಿಆರ್ ಜಯಣ. ಪಿ ಶೈಲೇಶ್ ಕುಮಾರ್, ಸಿದ್ದರಾಜು. ದೀಪ. ಪ್ರಭಾವತಿ. ಸಾಕಮ್ಮ. ರವಿ ಯೋಗೇಶ್. ಮಹಾದೇವಸ್ವಾಮಿ. ಸುವರ್ಣಮ್ಮ. ರಾಜಪ್ಪ. ರುಕ್ಮಿಣಿ. ಸೇರಿದಂತೆ ವಿದ್ಯಾರ್ಥಿ ಸಂಘದ ಅಧ್ಯಕ್ಷರು ಪದಾಧಿಕಾರಿಗಳು. ಹಾಜರಿದ್ದರು.



# ಆನೆ ದಂತ ಕಳ್ಳಸಾಗಣೆ

## ಸತ್ಯಮಂಗಲದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆರೋಪಿ ಸೆರೆ

**ಚಾಮರಾಜನಗರ :** ಕರ್ನಾಟಕ ತಮಿಳುನಾಡು ರಾಜ್ಯಗಳ ಗಡಿ ಚಾಮರಾಜನಗರ ಜಿಲ್ಲೆಗೆ ಹೊಂದಕೊಂಡಿರುವ ತಮಿಳುನಾಡಿದನ ಸತ್ಯಮಂಗಲಂ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಆನೆ ದಂತ ಕಳ್ಳಸಾಗಣೆ ಮಾಡುವಾಗ ಕಳ್ಳರು ಸಿಕ್ಕಿ ಬಿದ್ದಿರುವ ಘಟನೆ ವರದಿಯಾಗಿದೆ. ಬುಧವಾರ ಮುಂಜಾನೆ ಸತ್ಯಮಂಗಲದ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅರಣ್ಯಾಧಿಕಾರಿಗಳು ಗಸ್ತಿನಲ್ಲಿ ವಾಹನಗಳನ್ನು ಪರಿಶೀಲನೆ ಮಾಡುವಾಗ ಪಾಸಕುಟ್ಟೈ ಭಾಗಕ್ಕೆ ಸೇರಿದ ದುರೈಸ್ವಾಮಿ ಎಂಬ ವ್ಯಕ್ತಿಯನ್ನು ಹಿಡಿದು ವಿಚಾರಣೆ ನಡೆಸಿದಾಗ ಆತನ ಬಳಿ ಎರಡು ಆನೆಗಳನ್ನು ಬಚ್ಚಿಟ್ಟುಕೊಂಡಿರುವ ಸಂಗತಿ ತಿಳಿದು ವಿಚಾರಿಸಿ, ಆನೆ ದಂತ ಸಹಿತ ಆರೋಪಿಯನ್ನು ಬಂಧಿಸಲಾಯಿತು. 60 ಕಿಲೋ ತೂಕದ 2 ಆನೆ ದಂತ ಜಪ್ತಿ ಮಾಡಿರುವ ವಲಯ ಅರಣ್ಯಾಧಿಕಾರಿ ವಿಚಾರಣೆ ನಡೆಸುತ್ತಿದ್ದಾರೆ.



## ಅತ್ಯಾಚಾರ ಎಸಗಿದ್ದ ಚಿಕ್ಕಪ್ಪನಿಗೆ ಕಠಿಣ ಶಿಕ್ಷೆ

**ಚಾಮರಾಜನಗರ: ಸ್ವಂತ ಅಣ್ಣನ ಮಗಳ ಮೇಲೆ ಅತ್ಯಾಚಾರ ಎಸಗಿದ್ದ ದುರುಳ ಚಿಕ್ಕಪ್ಪನಿಗೆ ಚಾಮರಾಜನಗರ ಅಧಿಕ ಜಿಲ್ಲಾ ಮತ್ತು ಸತ್ರ ಎಫ್ಟಿಎಸ್ಸಿ ನ್ಯಾಯಾಲಯ 20 ವರ್ಷ ಕಠಿಣ ಶಿಕ್ಷೆ ವಿಧಿಸಿ ಆದೇಶಿಸಿದೆ. ಅಪರಾಧಿ ಚಾಮರಾಜನಗರ ಜಿಲ್ಲೆಯವನೇ ಆಗಿದ್ದು, ಸ್ವಂತ ಅಣ್ಣನ ಮಗಳಾದ ಅಪ್ರಾಪ್ತೆಯನ್ನು ಅಪಹರಿಸಿಕೊಂಡು ಹೋಗಿ ಲೈಂಗಿಕ ದೌರ್ಜನ್ಯ ಎಸಗಿ ಅತ್ಯಾಚಾರ ಎಸಗಿದ್ದ. ಸಾಕ್ಷ್ಯಾಧಾರಗಳಿಂದ ಕಾಮಾಂಧನ ಕೃತ್ಯ ಸಾಬೀತಾದ ಹಿನ್ನೆಲೆಯಲ್ಲಿ ಅಧಿಕ ಜಿಲ್ಲಾ ಮತ್ತು ಸತ್ರ ಎಫ್ಟಿಎಸ್ಸಿ ನ್ಯಾಯಾಧೀಶ ಎಸ್.ಜೆ.ಕೃಷ್ಣ ಅವರು ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ ಹಾಗೂ 80 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ.ಯೋಗೇಶ್ ವಾದ ಮಂಡಿಸಿದ್ದರು.**

## ನಿಂತಿದ್ದ ಬೈಕ್ ಗೆ ಕಾರು ಡಿಕ್ಕಿ : ಓರ್ವ ಬಲಿ

**ಚಾಮರಾಜನಗರ:** ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ತೆರಳುತ್ತಿದ್ದ ವೇಳೆ ಕಾರು ಡಿಕ್ಕಿಯಾಗಿ ಓರ್ವ ಮೃತಪಟ್ಟಿದ್ದಾನೆ. ಗುಂಡ್ಲುಪೇಟೆಯ ಹಂಗಳ ರಸ್ತೆಯಲ್ಲಿ ಘಟನೆ ನಡೆದಿದೆ. ಹಾಸನ ಜಿಲ್ಲೆ ಅರಕಲಗೂಡು ತಾಲೂಕಿನ ಗಣೇಶ್ (23) ಎಂಬಾತ ಮೃತಪಟ್ಟ ಬೈಕ್ ಸವಾರ. ಈತನ ಸ್ನೇಹಿತ ಅಪಘಾತದಿಂದ ಪಾರಾಗಿದ್ದಾನೆ. ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ತೆರಳುತ್ತಿದ್ದಾಗ ಹಿಂಬದಿ ಸವಾರ ಮೂತ್ರ ವಿಸರ್ಜನೆಗೆಂದು ರಸ್ತೆ ಪಕ್ಕಕ್ಕೆ ತೆರಳಿದ್ದ. ಇದೇ ವೇಳೆ ಎದುರಿನಿಂದ ಬಂದ ಕೇರಳ ಮೂಲದ ಕಾರು ನಿಂತಿದ್ದ ಬೈಕ್ಗೆ ಡಿಕ್ಕಿ ಹೊಡೆದಿದೆ. ತಲೆಗೆ ತೀವ್ರ ಪೆಟ್ಟು ಬಿದ್ದ ಪರಿಣಾಮ ಬೈಕ್ನಲ್ಲಿ ಕುಳಿತಿದ್ದ ಸವಾರ ಗಣೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೂತ್ರ ವಿಸರ್ಜನೆಗೆ ತೆರಳಿದ್ದ ಈತನ ಸ್ನೇಹಿತ ಅವಘಡದಿಂದ ಪಾರಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಅಪಘಾತ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ಗುಂಡ್ಲುಪೇಟೆ ಠಾಣೆ ಪೊಲೀಸರು ಕಾರು, ಬೈಕ್ ವಶಕ್ಕೆ ಪಡೆದು ಮುಂದಿನ ತನಿಖೆ ಕೈಗೊಂಡಿದ್ದಾರೆ. ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





**ರೋಟರಿ ಪಿರಿಯಾಪಟ್ಟಣ ಮಿಡ್ ಟೌನ್ ವತಿಯಿಂದ ಪಿರಿಯಾಪಟ್ಟಣ ತಾಲೂಕಿನ ತರಿಕಲ್ಲು ಗ್ರಾಮದ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಹಣ್ಣಿನ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆ ಕಾರ್ಯಕ್ರಮವನ್ನು ಆಚರಿಸಲಾಯಿತು ಮತ್ತು ವಿದ್ಯಾರ್ಥಿಗಳಿಗೆ ಒಂದೊಂದು ಹಣ್ಣಿನ ಗಿಡಗಳನ್ನು ಉಚಿತವಾಗಿ ವಿತರಿಸಲಾಯಿತು. ರೋಟರಿ ಮಿಡ್ ಟೌನ್ ಅಧ್ಯಕ್ಷ ಎಂ.ಎಂ.ರಾಜೇಗೌಡ, ವಲಯ 6ರ ವಲಯ ಸೇನಾನಿ ರೊ ರಾಜೇಗೌಡ ತಿರುಮಲಾಪುರ, ಕಾರ್ಯದರ್ಶಿ ಕೆ ಪಿ ಹೆಗ್ಡೆ, ಸದಸ್ಯರಾದ ಹರೀಶ್ ಗೌಡ, ಎಂ.ಪಿ ರಾಜು, ಪ್ರಕಾಶ್ ಮುತ್ತಿನ ಮುಳುಸೋಗೆ ಉಪಸ್ಥಿತರಿದ್ದರು.**

### ಸಾಹಿತಿ ಬನ್ನೂರು ಕೆ.ರಾಜು ಹೇಳಿಕೆ

# ತಾಯಿ ಭಾರತಿಯ ರಕ್ಷಣೆ ಎಲ್ಲರ ಹೊಣೆ

**ಮೈಸೂರು:** ವಂದೇ ಮಾತರಂ ಎಂಬುದು ಸಮಸ್ತ ಭಾರತೀಯರೆಲ್ಲರೂ ಒಂದುಗೂಡಿ ಹಾಡಿ ತಾಯಿ ಭಾರತಿಗೆ ವಂದಿಸುವ ಹಾಗೂ ದೇಶದ ಸಂವೃದ್ಧಿಯನ್ನು ಹೇಳುವ ವಿಶಿಷ್ಟವಾದ ಒಂದು ಭಾವೈಕ್ಯ ಗೀತೆಯಾಗಿದ್ದು ಇದರ ಮಹತ್ತ್ವದ ಆಶಯದಂತೆಯೇ ಪ್ರತಿಯೊಬ್ಬ ಭಾರತೀಯರೂ ಇರಬೇಕೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಅಗ್ರಹಾರದ ಶಂಕರ ಮಠ ಬಡಾವಣೆಯಲ್ಲಿರುವ ಶ್ರೀಕಾಂತ ಬಾಲಿಕಾ ಪ್ರೌಢ ಶಾಲೆ ಮತ್ತು ಹಿರಣ್ಮಯಿ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಭಾರತ ಸ್ವಾತಂತ್ರ್ಯೋತ್ಸವದ ಅಂಗವಾಗಿ ಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳು ಮತ್ತು ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾಮಾನ್ಯವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರತಿಭಾವಂತರೇ ಆಗಿದ್ದು ಅವರೊಳಗೆ ಅನೇಕ ಬಗೆಯ ಕಲೆಗಳಿದ್ದು ಅವುಗಳಲ್ಲಿ ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಸಾಂಸ್ಕೃತಿಕ ಪ್ರದರ್ಶನ ಕಲೆಗಳಿಗೆ ಬಹು ಮಹತ್ವದ ಸ್ಥಾನವುಂಟೆಂದರು.

ನಮ್ಮ ಭಾರತ ದೇಶವೆಂದರೆ ಇಡೀ ಜಗತ್ತಿಗೇ ಕೂಡಿ ಬಾಳುವ ಮನುಷ್ಯ ಪ್ರೇಮದ ಸಂದೇಶ ನೀಡಿರುವ ಭ್ರಾತೃತ್ವ ಬಾಂಧವ್ಯದ ಪುಣ್ಯ ಭೂಮಿ. ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿರುವ ಸರ್ವಜನಾಂಗದ ಶಾಂತಿಯ ತೋಟವಾಗಿದ್ದು ಇದರ ರಕ್ಷಣೆ ತಾಯಿ ಭಾರತಿಯ ಮಕ್ಕಳಾದ ನಮ್ಮೆಲ್ಲರದ್ದಾಗಿದೆ. ಅದರಲ್ಲೂ ಹೆಚ್ಚಿನ ಜವಾಬ್ದಾರಿ ವಿದ್ಯಾರ್ಥಿಗಳ ಮೇಲಿದ್ದು ಈ ದಿಶೆಯಲ್ಲಿ ದೇಶದ ಭವಿಷ್ಯದ ದೃಷ್ಟಿಯಿಂದ ಪ್ರತಿಯೊಬ್ಬರೂ ರಾಷ್ಟ್ರಾಭಿಮಾನಿಗಳಾಗಿ ಸಮಗ್ರವಾಗಿ, ಸಮರ್ಥವಾಗಿ ಭವಿಷ್ಯದಲ್ಲಿ ದೇಶ ಕಟ್ಟುವತ್ತ ಸನ್ಮಾರ್ಗದಲ್ಲಿ ಮುನ್ನಡೆಯಬೇಕು. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರ ವಲ್ಲ. ಸ್ವಾರ್ಥಿಗಳಾಗಿ ತಮ್ಮಿಷ್ಟ ಬಂದಂತೆ ಬದುಕುವುದಲ್ಲ. ನಮಗಾಗಿ ದೇಶವಲ್ಲ, ದೇಶಕ್ಕಾಗಿ ನಾವೆಂಬ ಭಾವ ನಮ್ಮಲ್ಲಿರಬೇಕು. ಸ್ವಾತಂತ್ರ್ಯ ಎನ್ನುವುದು ನಮ್ಮ ಅಮೂಲ್ಯ ಆಸ್ತಿಯಾಗಿದ್ದು ಅದನ್ನು ಉಳಿಸಿಕೊಂಡು ಸದ್ಬಳಕೆ ಮಾಡಿಕೊಳ್ಳುವುದರಲ್ಲಿ ನಮ್ಮ ದೇಶದ ಹಿತವಿದೆ ಹಾಗೂ ನಮ್ಮ ಬದುಕಿನ ಸುಖವಿದೆ ಹಾಗೆಯೇ ಭಾರತೀಯರಾಗಿ ಜೀವಮಾನದ ಸಾರ್ಥಕ್ಯವಿದೆ. ಎಂದ ಅವರು, ಈ ದೃಷ್ಟಿಯಿಂದ ಸ್ವಾತಂತ್ರ್ಯವು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರ ಬೇಕೆಂದು ಹೇಳಿದರು.



ಇದೇ ಸಂದರ್ಭದಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಡೆದ ದೇಶ ಭಕ್ತಿ ಮತ್ತು ದೇಶ ಪ್ರೇಮವನ್ನು ಬಿಂಬಿಸುವ ಗೀತೆಗಳು ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಾದ ದೇಶಭಕ್ತಿ ಗೀತೆಯಲ್ಲಿ 10ನೇ ತರಗತಿಯ ಶ್ರೀಲಕ್ಷ್ಮಿ (ಪ್ರಥಮ) ಮತ್ತು ಜಯಶೀಲಾ (ದ್ವಿತೀಯ), ವಂದೇ ಮಾತರಂ ಗೀತೆ ಹಾಡುಗಾರಿಕೆಯಲ್ಲಿ 9ನೇ ತರಗತಿಯ ಆರ್. ಲಾವಣ್ಯ (ಪ್ರಥಮ), ಮತ್ತು ಅಮೃತಾ (ದ್ವಿತೀಯ), ರಾಷ್ಟ್ರಗೀತೆ ಹಾಡುಗಾರಿಕೆಯಲ್ಲಿ 8ನೇ ತರಗತಿಯ ಪ್ರಿಯದರ್ಶಿನಿ (ಪ್ರಥಮ) ಹಾಗು ಕವನ (ದ್ವಿತೀಯ) ಅವರುಗಳಿಗೆ ಹಿರಣ್ಮಯಿ ಪ್ರತಿಷ್ಠಾನದ ಅಧ್ಯಕ್ಷ ಎ.ಸಂಗಪ್ಪ ಅವರು ಬಹುಮಾನ ವಿತರಿಸಿ ಅಭಿನಂದಿಸಿದರು.ಮುಖ್ಯ ಶಿಕ್ಷಕಿ ಜಿ.ಗಾಯತ್ರಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಹ ಶಿಕ್ಷಕ- ಶಿಕ್ಷಕಿಯರಾದ ಜಿ.ಸುಮಾ, ಮಲ್ಲಪ್ಪಠಕಾಯಿ, ಕೋಕಿಲಾ, ಸಿ.ಪೆಟುಲಾ ರೋಜಿತಾ, ಸುವರ್ಣ, ಎಸ್.ಆರ್.ಲಲಿತಾ, ಬಿ.ಕೆ. ಸುನಿತಾ, ಉತ್ತನಹಳ್ಳಿ ಮಹಾದೇವ, ಹಾಗು ಅನುಭವ ಟ್ಯುಟೋರಿಯಲ್ಸ್ ನ ಶಿಕ್ಷಕ ವಿ.ನಾರಾಯಣರಾವ್ ಮುಂತಾದವರಿದ್ದರು.

# ಇರಗಸಂದ್ರ ಗ್ರಾಮದಲ್ಲಿ ಶ್ರೀ ಮಾರಮ್ಮ, ಸಪ್ಪಲಮ್ಮ ದೇವಾಲಯ ಜೀರ್ಣೋದ್ಧಾರ

**ವೇಮಗಲ್ :** ಕೋಲಾರ ತಾಲೂಕು ವೇಮಗಲ್ ಹೋಬಳಿ ಮದ್ದೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಇರಗಸಂದ್ರ ಗ್ರಾಮದಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಶ್ರೀ ಮಾರೆಮ್ಮ ಮತ್ತು ಸಪ್ಪಲಮ್ಮ ದೇವತೆಗಳ ನೂತನವಾಗಿ ನಿರ್ಮಾಣವಾಗಿರುವ ದೇಗುಲದಲ್ಲಿ ಮೂರು ದಿನಗಳಿಂದ ನಡೆದ ನೂತನ ಶಿಖರ ಕಳಶ ಸ್ಥಾಪನೆ, ಜೀರ್ಣೋದ್ಧಾರ, ಅಷ್ಟ ಬಂಧನ ಮತ್ತು ಮಹಾ ಕುಂಭಾಭಿಷೇಕ ಕಾರ್ಯಕ್ರಮ ಬಹಳ ಅದ್ದೂರಿಯಾಗಿ ನೆರವೇರಿತು. ನೂತನವಾಗಿ ಸ್ಥಾಪಿಸಿದ ಶ್ರೀ ಮಾರೆಮ್ಮ ಮತ್ತು ಸಪ್ಪಲಮ್ಮ ದೇವಿ ದರ್ಶನಕ್ಕೆ ಸುತ್ತ ಮುತ್ತಲಿನ ಗ್ರಾಮಗಳಿಂದ ಅಪಾರ ಭಕ್ತರು ಆಗಮಿಸಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು ಭಾನುವಾರ ರಾತ್ರಿ ದೇವಿಗೆ ಪುಷ್ಪಾಲಂಕಾರ ಮಾಡಲಾಗಿತ್ತು, ಬೆಳಗಿನ ಜಾವ ನಾಲ್ಕು ಗಂಟೆಯಿಂದಲೇ ದೇವಿಗೆ ಪಂಚಾಮೃತ ಅಭಿಷೇಕ, ಕುಂಕುಮಾರ್ಚನೆ, ಪುಷ್ಪಾರ್ಚನೆ, ಮಾಡಲಾಯಿತು ಭಕ್ತರು ಹರಿಕೆ ಸಲ್ಲಿಸಿದರು ಪ್ರಧಾನ ಅರ್ಚಕರಾದ ಕದರಿಪುರ ಶ್ರೀ ವೇಣುಗೋಪಾಲಚಾರ್ಯ ನೇತೃತ್ವದಲ್ಲಿ ವಿಶೇಷ ಪೂಜೆ ಮಾಡಲಾಯಿತು. ಮದ್ದೇರಿ ರೇಷ್ಮೆ ಬೆಳೆಗಾರ ಸಹಕಾರ ಸಂಘದ ಅಧ್ಯಕ್ಷ ಜಂಬಾಪುರ ಎಂ ವೆಂಕಟರಾಮ್, ಮದ್ದೇರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ದೇವರಹಳ್ಳಿ ಡಿ.ಎನ್ , ಬಾಬು, ಮಾಜಿ ಅಧ್ಯಕ್ಷರಾದ ಶ್ರೀನಿವಾಸ ಗೌಡ, ವೇಮಗಲ್ ಹೋಬಳಿ ಕುರಿ ಮತ್ತು ಉಣ್ಣೆ ನಿಗಮದ ನಿರ್ದೇಶಕರಾದ ಜಂಬಾಪುರ ವಿನಯ್ ಕುಮಾರ್, ಮಾಜಿ ಸದಸ್ಯರಾದ ಡಿ.ವಿ, ಶ್ರೀನಿವಾಸ್, ಶ್ರೀ ರಾಮಯ್ಯ, ಇರಗಸಂದ್ರ ಗ್ರಾಮದ ಮುಖಂಡರಾದ ವಿ ಎಮ್ ನಾರಾಯಣಪ್ಪ, ಇರಗಸಂದ್ರ ಹಾಲು ಉತ್ಪಾದ ಸಹಕಾರ ಸಂಘದ ಅಧ್ಯಕ್ಷ ನಿರ್ಮಲ ಶ್ರೀನಿವಾಸ್, ಎಸ್ ಡಿ ಎಂ ಸಿ ಅಧ್ಯಕ್ಷ ಗಂಧರ್ವ ಹಾಟ್ಸ್ ಕೃಷ್ಣ, ನಂಜುಂಡಪ್ಪ, ಈ, ವಿ, ಮಂಜುನಾಥ್, ಈ,ಕೆ,ಚಂದ್ರಶೇಖರ್, ಈ,ಎಚ್, ಆನಂದ್ ಕುಮಾರ್, ಅಂಜಿನಪ್ಪ, ನಾರಾಯಣಸ್ವಾಮಿ, ಗ್ರಾಮ ಪಂಚಾಯಿತಿ ಅಧಿಕಾರಿಗಳಾದ ರೇವಣ್ಣ, ಕಾರ್ಯದರ್ಶಿ ವೆಂಕಟೇಶಪ್ಪ, ಹಾಗೂ ಊರಿನ ಗ್ರಾಮಸ್ಥರು ಹಾಗೂ ಉಪಸ್ಥಿತರಿದ್ದರು.

## ಬೆಳೆವಿಮೆ ನೋಂದಾಯಿಸಲು ನಾಳೆ ಕೊನೆಯ ದಿನ

**ಹುಳಿಯಾರು:** ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಾಲ ಪಡೆಯದ ರೈತಬಾಂಧವರು ರಾಗಿ ಮತ್ತು ಹುರುಳಿ ಬೆಳೆಗಳಿಗೆ ಆಗಸ್ಟ್ 16 ಬೆಳೆ ವಿಮೆ ನೋಂದಾಯಿಸಿಕೊಳ್ಳಲು ಕಡೆಯ ದಿನವಾಗಿದೆ. ರೈತರು ಇದರ ಸದುಪಯೋಗಪಡಿಸಿಕೊಳ್ಳಬಹುದು ಎಂದು ಸಹಾಯಕ ಕೃಷಿ ನಿರ್ದೇಶಕರಾದ ಹೆಚ್.ಎಸ್.ಶಿವರಾಜ್ ಕುಮಾರ್ ತಿಳಿಸಿದರು. ಈ ಸಂಬಂಧ ಪತ್ರಿಕಾಹೇಳಿಕೆ ನೀಡಿರುವ ಅವರು ಈಗಾಗಲೇ ತಾಲೂಕಿನಲ್ಲಿ ರೈತರು ಕೃಷಿ ಬೆಳೆಗಳಿಗೆ ಬೆಳೆ ವಿಮೆ ನೊಂದಾಯಿಸಿದ್ದು ಬ್ಯಾಂಕುಗಳಲ್ಲಿ ಸಾಲ ಪಡೆಯದ ರೈತರು ರಾಗಿ ಮತ್ತು ಹುರುಳಿ ಬೆಳೆಗಳಿಗೆ ಬೆಳೆ ವಿಮೆ ನೋಂದಾಯಿಸಲು ಆ.16 ಕೊನೆಯ ದಿನವಾಗಿದೆ. ರೈತರು ತಮ್ಮ ತಮ್ಮ ವ್ಯಾಪ್ತಿಯ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಹಾಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಸಾಮಾನ್ಯ ಸೇವಾ ಕೇಂದ್ರಗಳಲ್ಲಿ ಬೆಳೆ ವಿಮೆ ನೊಂದಾಯಿಸಿಕೊಳ್ಳಿ ಎಂದು ಶಿವರಾಜ್‌ಕುಮಾರ್ ತಿಳಿಸಿದ್ದಾರೆ.

## ಹಳೆ ವಿದ್ಯಾರ್ಥಿಗಳ ಸಂಘ ರಚನೆ

**ಹುಳಿಯಾರು:** ಹುಳಿಯಾರು ಸಮೀಪದ ಬೆಳಗುಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಅವಿರೋಧವಾಗಿ ಹಳೆ ವಿದ್ಯಾರ್ಥಿಗಳ ಸಂಘ ರಚಿಸಲಾಯಿತು. ಅಧ್ಯಕ್ಷರಾಗಿ ಪರಮೇಶ್ವರಯ್ಯ, ಗೌರವಾಧ್ಯಕ್ಷರಾಗಿ ವಿಶ್ವನಾಥ್ ಬಿ.ಎನ್, ಕಾರ್ಯದರ್ಶಿಗಳಾಗಿ ಮಂಜುನಾಥ್ ಬಿ.ಎನ್, ಉಪಾಧ್ಯಕ್ಷರಾಗಿ ಲಕ್ಷ್ಮಿಕಾಂತ್, ಖಜಾಂಚಿಯಾಗಿ ನವೀನ್ ಕುಮಾರ್, ಸಂಘಟನಾ ಕಾರ್ಯದರ್ಶಿಯಾಗಿ ಅರ್ಹಂತ್ ಜೈನ್ ಬಿ.ಎನ್ ಆಯ್ಕೆಯಾಗಿದ್ದಾರೆ. ಇವರುಗಳು ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ, ವಿದ್ಯಾರ್ಥಿಗಳ ಸುರಕ್ಷತೆಗಾಗಿ, ಸಹಪಠ್ಯ ಚಟುವಟಿಕೆಗಳ ರೂಪಿಸುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳ ಪ್ರಯೋಜಕರಾಗಿ ಶ್ರಮಿಸಲಿದ್ದಾರೆ.

## ರೈತ ಸಂಘದ ನಾಗಣ್ಣ ನಿಧನ



**ಹುಳಿಯಾರು:** ಹುಳಿಯಾರು ಹೋಬಳಿಯ ಕೆಂಕೆರೆ ತೋಟದ ಮನೆಯ ನಿವಾಸಿ ಕಾಡಿನರಾಜ ನಾಗಣ್ಣ (76) ಅವರು ವಯೋಸಹಜ ಬುಧವಾರ ನಿಧನರಾಗಿದ್ದಾರೆ. ತಾಲೂಕು ರೈತ ಸಂಘದ ಉಪಾಧ್ಯಕ್ಷರಾಗಿ, ಕೆಂಕೆರೆ ಗ್ರಾಮ ಪಂಚಾಯ್ತಿಗೆ 2 ಬಾರಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮೃತರಿಗೆ ಇಬ್ಬರು ಹೆಣ್ಣು ಹಾಗೂ ಇಬ್ಬರು ಗಂಡು ಮಕ್ಕಳು ಹಾಗೂ 8 ಮಂದಿ ಮೊಮ್ಮಕ್ಕಳು ಇದ್ದಾರೆ. ಕೆಂಕೆರೆ ತೋಟದಮನೆಯ ಮೃತರ ಜಮೀನಿನಲ್ಲಿ ಗುರುವಾರ ಬೆಳಗ್ಗೆ ಅಂತ್ಯಕ್ರಿಯೆ ನೆರವೇರಲಿದೆ.

## ಜಂಗಮಕೋಟೆ ಮರಿಯಪ್ಪ ನಿಧನ

**ವಿಜಯಪುರ:** ಪಟ್ಟಣದ ಒಕ್ಕಲಿಗರ ಬೀದಿಯಲ್ಲಿ ವಾಸವಾಗಿದ್ದ ವೀರಗಾಸೆ ಕಲಾವಿದರಾದ ಜಂಗಮಕೋಟೆ ಮರಿಯಪ್ಪ(86)



ರವರು ಮಂಗಳವಾರ ರಾತ್ರಿ ವಯೋಸಹಜ ಅನಾರೋಗ್ಯದಿಂದ ಜಂಗಮಕೋಟೆಯಲ್ಲಿ ನಿಧನರಾಗಿರುತ್ತಾರೆ. ಮೃತರ ಅಂತ್ಯಸಂಸ್ಕಾರವನ್ನು ಪಟ್ಟಣದ ಅಯೋಧ್ಯಾನಗರ ಶಿವಾಚಾರ ವೈಶ್ಯ ನಗರ್ತರ ರುದ್ರ ಭೂಮಿಯಲ್ಲಿ ಬುಧವಾರದಂದು ನೆರವೇರಿಸಲಾಯಿತು. ಮೃತರು 3 ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳನ್ನು ಅಗಲಿರುವರು. ಮರಿಯಪ್ಪ ರವರು ಹಲವಾರು ವೀರಗಾಸೆ ತಂಡಗಳನ್ನು ಕಟ್ಟಿ ತಮ್ಮ ಕುಟುಂಬದೊಂದಿಗೆ ರಾಜ್ಯದಲ್ಲೆಡೆ ವೀರಗಾಸೆ ನೃತ್ಯ ಮಾಡುತ್ತಾ ಸಂಚರಿಸುತ್ತಿದ್ದುದ್ದಲ್ಲದೆ ರಾಜ್ಯ ಪ್ರಶಸ್ತಿ ವಿಜೇತರು ಆಗಿದ್ದರು.

# ಶೋಷಿತರ ಗಟ್ಟಿ ಧ್ವನಿ ಅಂಬೇಡ್ಕರ್




**ಚಾಮರಾಜನಗರ:** ಚಾಮರಾಜನಗರದ ಭೋಗಾಪುರ ಗ್ರಾಮದ ಹೊರ ವಲಯದಲ್ಲಿ ಇರುವ ದೀಪಾ ಅಕಾಡೆಮಿ ಅಂಧ ಮಕ್ಕಳ ಶಾಲೆಯಲ್ಲಿ ಜನ ಹಿತಾಶಕ್ತಿ ಹೋರಾಟ ವೇದಿಕೆ ವತಿಯಿಂದ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ 133ನೇ ಜಯಂತಿ ಕಾರ್ಯಕ್ರಮವನ್ನು ಶಾಲೆಯ ಮಕ್ಕಳ ಜೊತೆ ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯ ಜಿಲ್ಲಾಧ್ಯಕ್ಷರಾದ ರಾಮಸಮುದ್ರ ಸುರೇಶ್ ಮಾತನಾಡಿ ವಿಶ್ವದಲ್ಲೇ ಅತ್ಯಂತ ಶ್ರೇ? ಸಂವಿಧಾನ ರಚಿಸುವ ಮೂಲಕ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಶೋಷಿತ ಸಮುದಾಯಗಳ ಗಟ್ಟಿ ಧ್ವನಿಯಾಗಿದ್ದಾರೆ ಎಂದು ಆಶಯ ವ್ಯಕ್ತಪಡಿಸಿದರು.

ಅಂಬೇಡ್ಕರ್ ರವರು ಕೇವಲ ಕುರ್ಚಿ ಅಧಿಕಾರಕ್ಕಾಗಿ ರಾಜಕಾರಣಕ್ಕೆ ಬಂದವರಲ್ಲ ದೇಶದ ಸಮಸ್ಯೆಯನ್ನು ಪರಿಹರಿಸಬೇಕೆಂಬ ಜವಾಬ್ದಾರಿಯನ್ನು ಹೊತ್ತವರು ಕೇವಲ ಭಾರತವಲ್ಲದೆ ಪ್ರಪಂಚದ 16ಕಿಂತ ಹೆಚ್ಚು ರಾಷ್ಟಗಳು ಅವರ ಜಯಂತಿಯನ್ನು ಆಚರಣೆ ಮಾಡುತ್ತಿವೆ ಇದಕ್ಕೆ ಕಾರಣ ಅವರ ವಿಶ್ವಮಟ್ಟದ ಸಾಧನೆ. ಬಿಸಿಲಿನ ಬೇವರಿನಲ್ಲಿ ಅಸ್ಪೃಶ್ಯತೆಯ ಬೆಂಕಿಯ ಕುಲುಮೆಯಲ್ಲಿ ಬೆಂದರು ಸಹ ಎಂತಹ ಕಷ್ಟಗಳಿಗೂ ಜಗ್ಗದೆ ಶ್ರದ್ಧೆಯಿಂದ ವಿಧ್ಯಾಭ್ಯಾಸ ಮಾಡಿ ಪ್ರಪಂಚದಲ್ಲೇ ಹೆಚ್ಚು ಡಿಗ್ರಿಗಳನ್ನು ಪಡೆದು ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ರಚಿಸುವ ಮೂಲಕ ಭಾರತದ ಭವಿಷ್ಯವನ್ನು ಬರೆದವರು ಎಂದರು.

ಶಿಕ್ಷಣದಿಂದ ಮಾತ್ರ ಪ್ರಗತಿ ಸಾಧ್ಯ ಅಂಧತ್ವ ದೇಹದ ನ್ಯೂನತೆ ಹೊರತು ವೈಫಲ್ಯವಲ್ಲ ಅಂಗವಿಕಲರು ವಿವಿಧ ಕ್ಷೇತ್ರಗಳಲ್ಲಿ ದೊಡ್ಡ ಮಟ್ಟದ ಸಾಧನೆಗಳನ್ನು ಮಾಡಿರುವ ನಿದರ್ಶನಗಳು ಇವೆ ಎಂದು ಶಾಲೆಯ ಅಂಧ ಮಕ್ಕಳಿಗೆ ಉತ್ತೇಜನದ ವಿಶ್ವಾಸದ ಮಾತುಗಳನ್ನು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕಿ ಜ್ಯೋತಿ, ದೊಡ್ಡಸ್ವಾಮಿ, ಕಾಡಳ್ಳಿ ನಾಗರಾಜು, ಪ್ರಕೃತಿ, ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಇದ್ದರು.

# ಸಮಾನ ನ್ಯಾಯ ಸಂವಿಧಾನದ ಆಶಯ

**ಹುಳಿಯಾರು:** ದೇಶದಲ್ಲಿ ಎಲ್ಲರಿಗೂ ಸಮಾನ ನ್ಯಾಯ ಸಿಗಬೇಕೆಂಬುದು ಸಂವಿಧಾನದ ಆಶಯ. ಅದಕ್ಕೆ ಅಗತ್ಯವಾದ ಎಲ್ಲಾ ಕಾನೂನುಗಳು ಸಂವಿಧಾನದಲ್ಲಿವೆ ಎಂದು ಹುಳಿಯಾರು ಪಿಎಸ್ಐ ಧರ್ಮಾಂಜಿ ತಿಳಿಸಿದರು. ಹುಳಿಯಾರು ವಲಯದ ವಿಜಯನಗರ ಕಾರ್ಯಕ್ಷೇತ್ರದಲ್ಲಿ ವಿಘ್ನೇಶ್ವರ ಜ್ಞಾನ ವಿಕಾಸ ಕೇಂದ್ರದ ಮಾಸಿಕ ಸಭೆಯಲ್ಲಿ ಹಮ್ಮಿಕೊಂಡಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದರು. ಸಂವಿಧಾನ ಯಾವೊಬ್ಬ ವ್ಯಕ್ತಿಯೂ ನ್ಯಾಯದಾನದಿಂದ ವಂಚಿತನಾಗಬಾರದು ಅಥವಾ ತಾರತಮ್ಯಕ್ಕೆ ಒಳಗಾಗದಂತೆ ಸಮಾನ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ತಿಳಿವಳಿಕೆಯ ಕೊರತೆ, ಹಣಕಾಸಿನ ಕೊರತೆಯಿಂದ ದುರ್ಬಲ ವರ್ಗದವರು ಶೋಷಿತರು ಹಾಗೂ ನಿರ್ಗತಿಕರು ನ್ಯಾಯದಿಂದ ವಂಚಿತರಾಗಬಾರದೆಂದು ಉಚಿತ ಕಾನೂನು ನೆರವು ಸಹ ನೀಡಲಿದೆ ಎಂದರು. ಇನ್ಸ್ಯೂರೆನ್ಸ್ ಇಲ್ಲದೆ, ಚಾಲನ ಪರವಾನಗಿ ಇಲ್ಲದೆ, ಹೆಲ್ಮೆಟ್ ಇಲ್ಲದೆ ವಾಹನ ಓಡಿಸುವುದು ಅಪರಾಧ, ಬಾಲ್ಯ ವಿವಾಹ ಮಾಡುವುದು ಸಹ ಅಪರಾಧ, ಹೊಟೆಲ್, ಗೂಡಂಗಡಿಗಳಲ್ಲಿ ಪರವಾನಗಿ ಇಲ್ಲದೆ ಮದ್ಯ ಮಾರಾಟ ಮಾಡುವುದು ಅಪರಾಧ, ವರದಕ್ಷಿಣೆಗಾಗಿ ಪತ್ನಿಯನ್ನು ಪೀಡಿಸುವುದು, ಕುಡಿದು ಬಂದು ಗಲಾಟೆ ಮಾಡುವುದು, ಲೈಂಗಿಕ ಕಿರುಕುಳ ನೀಡುವುದು ಅಪರಾಧವಾಗಿದೆ ಎಂದು ವಿವರಿಸಿದರು. ಜ್ಞಾನ ವಿಕಾಸ ಕೇಂದ್ರದ ಅಧ್ಯಕ್ಷರಾದ ದಾಯಾಮಣಿ, ವಲಯದ ಮೇಲ್ವಿಚಾರಕರಾದ ಚೈತ್ರ, ಜ್ಞಾನ ವಿಕಾಸ್ ಸಮನ್ವಯ ಅಧಿಕಾರಿ ಸುನಿತಾ, ಸೇವಾ ಪ್ರತಿನಿಧಿ ವಿಜಯಮ್ಮ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



# ಶಾಲಾ, ಕಾಲೇಜಿನಲ್ಲಿ ಸರಣಿ ಕಳ್ಳತನ

**ಹುಳಿಯಾರು:** ಹುಳಿಯಾರಿನ ಕೆಂಕೆರೆ ರಸ್ತೆಯಲ್ಲಿರುವ ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ರಾತ್ರಿ ಸರಣಿ ಕಳ್ಳತನ ನಡೆದಿದೆ. ಬೀಗ ಹೊಡೆದು ಒಳ ನುಗ್ಗಿರುವ ಕಳ್ಳರು ಪ್ರೌಢಾಶಾಲೆಯಲ್ಲಿ 1 ಸಿಸಿ ಟಿವಿ ಡಿವಿಆರ್ 3 ಲ್ಯಾಪ್ ಟಾಪ್, 9 ಯುಪಿಎಸ್ ಬ್ಯಾಟರಿ, ಪಿಯು ಕಾಲೇಜಿನಲ್ಲಿ 6 ಯುಪಿಎಸ್ ಬ್ಯಾಟರಿ 1 ಲ್ಯಾಪ್ ಟಾಪ್ 2 ಸಿಸಿ ಟಿವಿ ಡಿವಿಆರ್ ಸಿಸಿ ಟಿವಿ 4 ಕ್ಯಾಮರ ಹಾಗೂ ಪದವಿ ಕಾಲೇಜಿನಲ್ಲಿ 16 ಯುಪಿಎಸ್ ಬ್ಯಾಟರಿಗಳು, 3 ಸಿಸಿ ಟಿವಿ ಡಿವಿಆರ್ ಕದ್ದಿದ್ದಾರೆ.

3 ಕಡೆಯೂ ಹತ್ತಕ್ಕೂ ಹೆಚ್ಚು ಕಂಪ್ಯೂಟರ್‌ಗಳು, ಬೆಲೆಬಾಳುವ ಪ್ರಿಂಟರ್‌ಗಳು ಇದ್ದರೂ ಸಹ ಅವ್ಯಾವುವನ್ನೂ ಮುಟ್ಟದೆ ಡಿವಿಆರ್, ಬ್ಯಾಟರಿ, ಲ್ಯಾಪ್‌ಟಾಪ್‌ಗಳನಷ್ಟೆ ಕಳ್ಳರು ಕಳ್ಳತನ ಮಾಡಿದ್ದಾರೆ. ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಹುಳಿಯಾರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪಿಎಸ್ಐ ಧರ್ಮಾಂಜಿ



ಅವರು ಕಳ್ಳರ ಪತ್ತೆಗೆ ಬಲೆ ಬೀಸಿದ್ದಾರೆ.

ಸರ್ಕಾರಿ ಶಾಲಾಕಾಲೇಜಿಗಳಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಶಾಲಾಕಾಲೇಜುಗಳಿಗೆ ಸೌಲಭ್ಯ ನಿರ್ಮಾಣ ಮಾಡುವುದು ಕಷ್ಟಕರ. ಅಂತದರಲ್ಲೂ ಇಲಾಖೆ, ದಾನಿಗಳ ಸಹಕಾರ ಪಡೆದು ಹಣಕಾಸು ಹೊಂದಿಸಿ ಮೂಲಸೌಲಭ್ಯ ನಿರ್ಮಿಸಿಕೊಳ್ಳಲಾಗಿದೆ. ಈಗ ಯುಪಿಎಸ್, ಸಿಸಿಟಿವಿ, ಲ್ಯಾಪ್ ಟಾಪ್‌ಗಳ ಕಳವು ವಿದ್ಯಾರ್ಥಿಗಳ ಭವಿಷ್ಯದ ದೃಷ್ಠಿಯಿಂದ ನಷ್ಟವಾಗಿದ್ದು ಪೊಲೀಸ್ ಇಲಾಖೆ ಕಳ್ಳರನ್ನು ಪತ್ತೆಯಚ್ಚಿ ಕದ್ದಿರುವ ವಸ್ತುಗಳನ್ನು ಮರಳಿಪಡೆದು ಶಾಲಾಕಾಲೇಜಿಗೆ ಹಿಂದಿರುಗಿಸಬೇಕಿದೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# 'ಸಂಜು ವೆಡ್ಸ್ ಗೀತಾ 2'ನಲ್ಲಿ ಶ್ರೀನಗರ ಕಿಟ್ಟಿಗೆ ವಿಲನ್ ಆದ ರಾಗಿಣಿ ದ್ವಿವೇದಿ



ಸ್ಯಾಂಡಲ್‌ವುಡ್ ಬ್ಯೂಟಿ ರಾಗಿಣಿ ದ್ವಿವೇದಿ ಸದ್ಯ ಕನ್ನಡ ಮತ್ತು ಪರಭಾಷೆಯ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಇದರ ನಡುವೆ ಹೊಸ ಬಗೆಯ ಪಾತ್ರದಲ್ಲಿ ಕಾಣಿಸಿಕೊಳ್ಳಲು ನಟಿ ಮುಂದಾಗಿದ್ದಾರೆ. ಶ್ರೀನಗರ ಕಿಟ್ಟಿಗೆ ವಿಲನ್ ಆಗಿ ರಾಗಿಣಿ ಕಾಣಿಸಿಕೊಂಡಿದ್ದಾರೆ.

'ಸಂಜು ವೆಡ್ಸ್ ಗೀತಾ ಪಾರ್ಟ್ 2' ಸಿನಿಮಾದಲ್ಲಿ ಶ್ರೀನಗರ ಕಿಟ್ಟಿ ಮತ್ತು ರಚಿತಾ ರಾಮ್ ಲೀಡ್ ರೋಲ್‌ನಲ್ಲಿ ಕಾಣಿಸಿಕೊಳ್ತಿದ್ದಾರೆ. ಈ ಚಿತ್ರದಲ್ಲಿ ಹೀರೋ ಶ್ರೀನಗರ ಕಿಟ್ಟಿಗೆ ರಾಗಿಣಿ ವಿಲನ್ ಆಗಿ ಠಕ್ಕರ್ ಕೊಡಲಿದ್ದಾರೆ.

ಹೀರೋಯಿನ್ ಆಗಿ ಗ್ಲ್ಯಾಮರ್ ಗೊಂಬೆಯಾಗಿ ಗುರುತಿಸಿಕೊಂಡಿದ್ದ ನಟಿ ರಾಗಿಣಿ, 'ಸಂಜು ವೆಡ್ಸ್ ಗೀತಾ 2' ಮೂಲಕ ವಿಭಿನ್ನ ಪಾತ್ರದಲ್ಲಿ ನಟಿಸುವ ಪ್ರಯತ್ನ ಮಾಡುತ್ತಿದ್ದಾರೆ. ಚಿತ್ರದಲ್ಲಿ ರಾಗಿಣಿ ವಿಲನ್ ಎಂದು ಅಭಿಮಾನಿಗಳು ಥ್ರಿಲ್ ಆಗಿದ್ದಾರೆ. ಅದಷ್ಟೇ ಅಲ್ಲ, ಚಿತ್ರದಲ್ಲಿ ಸ್ಪೆಷಲ್ ಹಾಡಿಗೂ ಕೂಡ ನಟಿ ಹೆಜ್ಜೆ ಹಾಕಿದ್ದಾರೆ.

ಇನ್ನೂ ಶ್ರೀನಗರ ಕಿಟ್ಟಿ, ರಮ್ಯಾ ನಟನೆಯ 'ಸಂಜು ವೆಡ್ಸ್ ಗೀತಾ' ಮೊದಲ ಭಾಗ ಸೂಪರ್ ಡೂಪರ್ ಹಿಟ್ ಆಗಿತ್ತು. ಹಾಗಾಗಿ ನಾಗಶೇಖರ್ ನಿರ್ದೇಶನದ ಈ ಸಿನಿಮಾ ಬಗ್ಗೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ. ರಿಲೀಸ್‌ಗಾಗಿ ಫ್ಯಾನ್ಸ್ ಕಾಯುತ್ತಿದ್ದಾರೆ.



## ವೈಕುಂಠ ಸಮಾರಾಧನೆ

# ಕನ್ನಡದಲ್ಲಿ ಹೀಗೊಂದು ಸಿನಿಮಾ

ಜನರನ್ನು ಚಿತ್ರಮಂದಿರಕ್ಕೆ ಕರೆತರಲು ವಿನೂತನ ರೀತಿಯ ಶೀರ್ಷಿಕೆ, ಪ್ರಚಾರ ನಡೆಸುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಆ ಸಾಲಿಗೆ 'ವೈಕುಂಠ ಸಮಾರಾಧನೆ' ಚಿತ್ರವೊಂದು ಸೇರ್ಪಡೆಯಾಗಿದೆ. ವೃತ್ತಿಯಲ್ಲಿ ಹೆಸರು ಮಾಡಿರುವ ಅಡ್ವೋಕೇಟ್ ರಜತ್ ಮೌರ್ಯ ಅವರ ಪ್ರವೃತ್ತಿ ಬಣ್ಣದಲೋಕ. ಬಿಡುವಿನ ವೇಳೆಯಲ್ಲಿ ನಟನೆ, ನಿರ್ದೇಶನದ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಜೊತೆಗೆ ಮಾಡೆಲ್ ಆಗಿದ್ದು, ಇವರ ಅಭಿನಯದ ಜಾಹಿರಾತುಗಳು ಐಪಿಎಲ್ ಪಂದ್ಯಗಳಲ್ಲಿ ಸ್ಟ್ರೀಮಿಂಗ್ ಆಗಿದೆ. ಇದರ ಅನುಭವದಿಂದಲೇ ಸಿನಿಮಾಕ್ಕೆ ಕಥೆ,ಚಿತ್ರಕಥೆ,ನಿರ್ದೇಶನ ಮತ್ತು ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಗೇರ್ ಗಲ್ ಫಿಲಂಸ್ ಬ್ಯಾನರ್ ಅಡಿಯಲ್ಲಿ ಆಶಾ ಗೇರ್ ಗಲ್ ನಿರ್ಮಾಣ ಮಾಡುತ್ತಿದ್ದಾರೆ. ಕಲ್ಕಿ ಜಯಂತಿ ಶ್ರಾವಣ ಶನಿವಾರ ಶುಭ ದಿನದಂದು ಪೋಸ್ಟರ್ ಬಿಡುಗಡೆ ಸಮಾರಂಭ ನಡೆಯಿತು.



ಸದಭಿರುಚಿಯ 'ಬ್ಲಿಂಕ್' 'ಜಲಪಾತ' 'ಶಾಖಾಹಾರಿ' 'ಕೆರೆಬೇಟೆ' '4ಎನ್6' ಮತ್ತು 'ಕ್ಷಮಿಸಿ ನಿಮ್ಮ ಖಾತೆಯಲ್ಲಿ ಹಣವಿಲ್ಲ' ಚಿತ್ರಗಳ ನಿರ್ಮಾಪಕರು, ನಿರ್ದೇಶಕರು, 'ಹಾಸ್ಟಲ್ ಹುಡುಗರು ಬೇಕಾಗಿದ್ದಾರೆ' ವಾರ್ಡನ್ ಖ್ಯಾತಿಯ ಮಂಜುನಾಥ್ ಮತ್ತು ವಕೀಲರುಗಳು ಆಗಮಿಸಿ ಸ್ನೇಹಿತನಿಗೆ ಶುಭ ಹಾರೈಸಿದರು. 'ಇದು ನಮ್ಮ ಸಿನಿಮಾದ ಡೆತ್ ಲುಕ್ ಪೋಸ್ಟರ್' ಎಂದು ವೈಕುಂಠ ಸಮಾರಾಧನೆ ಪತ್ರಿಕೆ ರೀತಿಯಲ್ಲಿಯೇ ಕಪ್ಪು ಬಿಳುಪಿನಲ್ಲಿ ಸಿದ್ದಗೊಂಡಿದ್ದು, ಜನನ, ಮರಣ ಇರುವಂತೆ ಇದರಲ್ಲಿ ಮುಹೂರ್ತ 10.8.24 ರಿಲೀಸ್ 12.12.25 ಎಂಬುದಾಗಿ ಹೇಳಿಕೊಂಡಿದೆ. ಈಗಾಗಲೇ ಡೆತ್ ಲುಕ್ ಪೋಸ್ಟರ್ ರೀಲ್ಸ್ ವೈರಲ್ ಆಗಿದ್ದು, ಎಲ್ಲಾ ಕಡೆ ಸದ್ದು ಮಾಡುತ್ತಿದೆ.

ಸಂಗೀತ ರುತ್ವಿಕ್‌ಮುರಳಿಧರ್, ಛಾಯಾಗ್ರಹಣ ಹರ್ಷಿತ್.ಬಿ.ಗೌಡ, ಕಾರ್ಯಕಾರಿ ನಿರ್ಮಾಪಕ ನಾಗೇಂದ್ರ ಯಡಿಯಾಳ್ ಅವರದಾಗಿದೆ. ಆದರ್ಶ್‌ಬೆಳ್ಳೂರು, ದರ್ಶನ್‌ಕುಮಾರ್, ಸಿದ್ದಾನ್ ವಿಜಯ್, ನವೀನ್, ಸಚ್ಚಿನ್ ನಿರ್ದೇಶನ ತಂಡದಲ್ಲಿ ಇರುತ್ತಾರೆ. ಶೇಕಡ 60 ರಷ್ಟು ಮಲೆನಾಡು, ಉಳಿದುದನ್ನು ಬೆಂಗಳೂರು ಸುತ್ತಮತ್ತ ಚಿತ್ರೀಕರಿಸಲು ಯೋಜನೆ ರೂಪಿಸಲಾಗಿದೆ.



# ದಿಗಂತ್ ನಟನೆಯ ಎಡಗೈಯೇ ಅಪಘಾತಕ್ಕೆ ಕಾರಣ ಚಿತ್ರದ ಹೊಸ ಪೋಸ್ಟರ್ ರಿಲೀಸ್

ಅಂತಾರಾಷ್ಟ್ರೀಯ ಎಡಗೈ ಬಳಕೆದಾರರ ದಿನದ ಅಂಗವಾಗಿ 'ಎಡಗೈ ಅಪಘಾತಕ್ಕೆ ಕಾರಣ' ಸಿನಿಮಾ ತಂಡದಿಂದ ಹೊಸ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ಎಡಗೈ ಬಳಸುವವರನ್ನೇ ಗಮನದಲ್ಲಿಟ್ಟುಕೊಂಡು, ಅವರ ಜೀವನ ಶೈಲಿ ಕುರಿತು ಈ ಚಿತ್ರ ಕಟ್ಟಿಕೊಡಲಾಗಿದೆ. ಅದರಂತೆಯೇ ಪೋಸ್ಟರ್ ಕೂಡ ಆಕರ್ಷಕವಾಗಿದೆ. ಸೆಟ್ಟೇರಿದ ದಿನದಂದಲೂ ಚಿತ್ರತಂಡ ವಿಭಿನ್ನ ಪೋಸ್ಟರ್ ಅನಾವರಣ ಮಾಡುವ ಮೂಲಕ ಪ್ರೇಕ್ಷಕರ ಕುತೂಹಲವನ್ನು ಹೆಚ್ಚು ಮಾಡಿದೆ.

'ಎಡಗೈಯೇ ಅಪಘಾತಕ್ಕೆ ಕಾರಣ' ಸಿನಿಮಾಗೆ ಸಮರ್ಥ್ ಬಿ ಕಡಕೊಳ್ ಆಯಕ್ಷನ್ ಕಟ್ ಹೇಳಿದ್ದು, ಇದು ಇವರ ಚೊಚ್ಚಲ ನಿರ್ದೇಶನದ ಚಿತ್ರವಾಗಿದೆ. ಮರ್ಡರ್ ಮಿಸ್ಟರಿ, ಡಾರ್ಕ್ ಕಾಮಿಡಿ ಹಾಗೂ ಸಸ್ಪೆನ್ಸ್ ಥ್ರಿಲ್ಲರ್ ಸಬ್ಜೆಕ್ಟ್ ಒಳಗೊಂಡ ಕಥಾ ಹಂದರ ಈ ಸಿನಿಮಾದಲ್ಲಿದೆ. ದೂದ್ ಪೇಡ ದಿಗಂತ್ ನಾಯಕನಾಗಿ ನಟಿಸಿದ್ದು, ಅವರಿಗೆ ಜೋಡಿಯಾಗಿ ಹೊಸ ನಟಿ ಧನು ಹರ್ಷ ನಟಿಸಿದ್ದಾರೆ. ನಿಧಿ ಸುಬ್ಬಯ್ಯ, ರಾಧಿಕಾ ನಾರಾಯಣ್, ಭಜರಂಗಿ ಲೋಕಿ, ಕೃಷ್ಣ ಹೆಬ್ಬಾಳ್ ಕೂಡಾ ಚಿತ್ರದ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

'ಎಡಗೈ ಅಪಘಾತಕ್ಕೆ ಕಾರಣ' ಸಿನಿಮಾವನ್ನು ಹೈಫನ್ ಪಿಕ್ಚರ್ಸ್ ಹಾಗೂ ಗುರುದತ್ ಗಾಣಿಗ ಫಿಲ್ಮಂಸ್ ಬ್ಯಾನರ್ ನಡಿ ಗುರುದತ್ ಗಾಣಿಗ ಹಾಗೂ ನಿರ್ದೇಶಕ ಸಮರ್ಥ್ ಬಿ ಕಡಕೊಳ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರಕ್ಕೆ ಅಭಿಮನ್ಯು ಸದಾನಂದ್ ಕ್ಯಾಮೆರಾ ವರ್ಕ್, ರಾಹುಲ್ ವಿ ಪಾರ್ವತಿಕರ್ ಹಾಗೂ ಶ್ರೀಪಾದ್ ಜೋಶಿ ಸಂಭಾಷಣೆ ಇದೆ.






## ವಿನೇಶ್ ಫೋಗಟ್ ಅರ್ಜಿ ವಜಾ

# ಸಿಗಲ್ಲ ಬೆಳ್ಳಿ ಪದಕ

ಭಾರತೀಯ ಕುಸ್ತಿಪಟು ವಿನೇಶ್ ಫೋಗಟ್ ಅವರು ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ಕ್ರೀಡಾ ಮಧ್ಯಸ್ಥಿಕೆ ನ್ಯಾಯ ಮಂಡಳಿ ವಜಾಗೊಳಿಸಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ನಿಗದಿಗಿಂತ 100 ಗ್ರಾಂ ಅಧಿಕ ತೂಕ ಹೊಂದಿದ್ದಕ್ಕೆ ಫೋಗಟ್ ಅವರನ್ನು ಪ್ಯಾರಿಸ್ ಒಲಿಂಪಿಕ್ಸ್ ಮಹಿಳೆಯರ ಕುಸ್ತಿ ಸ್ಪರ್ಧೆಯ 50 ಕೆ.ಜಿ. ವಿಭಾಗದ ಫೈನಲ್‌ನಿಂದ ಅನರ್ಹಗೊಳಿಸಲಾಗಿತ್ತು. ಕ್ರೀಡಾಕೂಟದ ಸಂದರ್ಭದಲ್ಲಿ ವಿವಾದ ಪರಿಹಾರಕ್ಕಾಗಿ ವಿಶೇಷವಾಗಿ ಸ್ಥಾಪಿಸಲಾಗಿರುವ ಸಿಎಎಸ್‌ನ ತಾತ್ಕಾಲಿಕ ವಿಭಾಗಕ್ಕೆ ತಮ್ಮ ವಿರುದ್ಧದ ಕ್ರಮ ಪ್ರಶ್ನಿಸಿ ವಿನೇಶ್ ಆ.9 ರಂದು ಮೇಲ್ಮನವಿ ಸಲ್ಲಿಸಿದ್ದರು.

ಮನವಿಯನ್ನು ಆಲಿಸಿದ ಸಿಎಎಸ್ ಆರಂಭದಲ್ಲಿ ಆ.10 ರಂದು ತೀರ್ಪು ಪ್ರಕಟಿಸುವುದಾಗಿ ಹೇಳಿತ್ತು. ನಂತರ ಆ.13 ರಂದು ಪ್ರಕಟಿಸಲಾಗುವುದು ಎಂದಿತ್ತು. ಮಂಗಳವಾರ ತೀರ್ಪನ್ನು ಮೂರನೇ ಬಾರಿ ಮುಂದೂಡಿದ್ದು, ಆ.16 ರಂದು ಪ್ರಕಟಿಸುವುದಾಗಿ ಹೇಳಿತ್ತು. ಆದರೆ ಈಗ ಅರ್ಜಿ ವಜಾಗೊಂಡಿದೆ ಎಂದು ಸುದ್ದಿ ಪ್ರಕಟವಾಗಿದೆ.

ಫೈನಲ್ ಪಂದ್ಯದ ಮುನ್ನಾದಿನ ನಾನು ಮೂರು ಪಂದ್ಯವನ್ನು ಆಡಿದ್ದೇನೆ. ಆ ದಿನ ನಿಗದಿತ 50 ಕೆಜಿ ತೂಕದ ಮಿತಿಯಲ್ಲಿ ಇದ್ದ ಕಾರಣ ಜಂಟಿಯಾಗಿ ಬೆಳ್ಳಿ ಪದಕದ ಗೌರವ ನೀಡಬೇಕೆಂದು ಮನವಿ ಮಾಡಿದ್ದರು. ವಿನೇಶ್ ಫೋಗಟ್ ಪರವಾಗಿ ಖ್ಯಾತ ವಕೀಲ ಹರೀಶ್ ಸಾಳ್ವೆ ಮತ್ತು ವಿದುಷ್ಪತ್ ಸಿಂಘಾನಿಯಾ ಅವರು ಕ್ರೀಡಾ ಮಧ್ಯಸ್ಥಿಕೆ ನ್ಯಾಯಾಲಯದಲ್ಲಿ ವಾದ ಮಂಡಿಸಿದ್ದರು.






ಕಣಗಾಲು ಗ್ರಾಮದ ಭೂತಾಯಿ ರೈತ ಉತ್ಪಾದನಾ ಕೇಂದ್ರದಲ್ಲಿ ಇಂದು 78ನೇ ಸ್ವಾತಂತ್ರ್ಯೋತ್ಸವ ನಡೆಯಿತು. ಹಿರಿಯ ರೈತ ಕೃಷ್ಣಮೂರ್ತಿ ಹಾಗೂ ಕುಳ್ಳೇಗೌಡರಿಂದ ಧ್ವಜಾರೋಹಣ ನೆರವೇರಿತು. ಈ ಸಂದರ್ಭದಲ್ಲಿ ಕಾರ್ಯದರ್ಶಿ ರಾಜಶೇಖರ್, ಅಧ್ಯಕ್ಷ ಸುಪ್ರಿತ. ಗ್ರಾ.ಪಂ. ಸದಸ್ಯ, ಉದ್ಯಮಿ ಹನುಮಂತೇಗೌಡ, ಪುಟ್ಟರಾಜು ಅಡಗೂರು, ರೈತರಾದ ವೈರಮುಡಿ ರಾಮೇಗೌಡ, ಮಂಜುನಾಥ್, ಪ್ರಭುಗೌಡ ಮತ್ತಿತರರು ಭಾಗಿಯಾಗಿದ್ದರು.

# ಮಂಡ್ಯದಲ್ಲಿ ಮೆಡಿಕಲ್ ಮಾಫಿಯಾ

## ಲೋಕಾಯುಕ್ತ ದಾಳಿಯಲ್ಲಿ ಲಕ್ಷಾಂತರ ರೂ. ಮೌಲ್ಯದ ಅವಧಿ ಮುಗಿದ ಮೆಡಿಸಿನ್ ಪತ್ತೆ

**ಮಂಡ್ಯ:** ಕೊರೊನಾ ಕಾಲದಲ್ಲಿ ರೆಮ್ಡಿಸಿವರ್ ಎಂಬ ಇಂಜೆಕ್ಷನ್‌ಗೆ ಜನರು ಪರದಾಡುತ್ತಿದ್ದರು. ಈ ಇಂಜೆಕ್ಷನ್‌ಗೆ ಖಾಸಗಿ ಆಸ್ಪತ್ರೆಯಲ್ಲಿ 1 ರಿಂದ 2 ಲಕ್ಷದವರೆಗೆ ತೆಗೆದುಕೊಂಡಿದ್ದಾರೆ. ಇದೀಗ 40 ಲಕ್ಷ ಮೌಲ್ಯದ ಅವಧಿ ಮುಗಿದಿರುವ ಇದೇ ರೆಮ್ಡಿಸಿವರ್ ಮೆಡಿಸನ್ ಮಂಡ್ಯದ ಮಿಮ್ಸ್‌ನ ಔಷಧಿ ಉಗ್ರಾಣದಲ್ಲಿ ಇರುವುದು ಕಂಡುಬಂದಿದೆ.

ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಅವಧಿಗೆ ಮೀರಿನ ಲಕ್ಷಾಂತರ ರೂಪಾಯಿಯ ಮೆಡಿಸಿನ್ ಇದ್ದು, ಅಧಿಕಾರಿಗಳು ಏಜೆನ್ಸಿಯವರೊಂದಿಗೆ ಮೆಡಿಕಲ್ ಮಾಫಿಯಾದಲ್ಲಿ ಭಾಗಿಯಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಮಾಡುತ್ತಿದ್ದಾರೆ ಎಂದು ಕೇಶವಮೂರ್ತಿ ಎಂಬವರು ಲೋಕಾಯುಕ್ತಕ್ಕೆ ದೂರು ನೀಡಿದರು. ದೂರಿನ ಅನ್ವಯ ಮಿಮ್ಸ್‌ನ ಔಷಧಿ ಉಗ್ರಾಣದ ಮೇಲೆ ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು ನೇತೃತ್ವದಲ್ಲಿ ರೇಡ್ ಮಾಡಲಾಗಿದೆ.

ಈ ರೇಡ್‌ನಲ್ಲಿ ಪ್ರಮುಖವಾಗಿ ಕೊರೊನಾ ಕಾಲದಲ್ಲಿ ಬಹು ಬೇಡಿಕೆ ಇದ್ದ ರೆಮ್ಡಿಸಿವರ್ ಇಂಜೆಕ್ಷನ್ ಎಕ್ಸ್‌ಪೈರಿಯಾಗಿ ಇರೋದು ಕಂಡು ಬಂದಿದೆ. ಒಂದಲ್ಲಾ ಎರಡಲ್ಲಾ ಬರೋಬ್ಬರಿ 40 ಲಕ್ಷ ಮೌಲ್ಯದ ರೆಮ್ಡಿಸಿವರ್ ಇಂಜೆಕ್ಷನ್ ಅವಧಿ 2022ರಲ್ಲಿಯೇ ಮುಕ್ತಾಯವಾಗಿದೆ. ಕೊರೊನಾ ಸಂದರ್ಭದಲ್ಲಿ ಈ ಇಂಜೆಕ್ಷನ್ ಕೇಳಿದ್ರೆ ಮಿಮ್ಸ್‌ನ ಅಧಿಕಾರಿ ವರ್ಗ ನಮ್ಮ ಬಳಿ ಸ್ಟಾಕ್ ಇಲ್ಲ ಎಂಬ ಮಾತನ್ನು ಹೇಳುತ್ತಿತ್ತು. ಆದರೆ ಇದೀಗ ಅದೇ ರೆಮ್ಡಿಸಿವರ್ ಇಂಜೆಕ್ಷನ್ ಅಪಾರ ಮಟ್ಟದಲ್ಲಿ ಅವಧಿ ಮುಕ್ತಾಯಗೊಂಡಿದೆ.

ಕೇವಲ ರೆಮ್ಡಿಸಿವರ್ ಮಾತ್ರವಲ್ಲ ಬೇರೆ ಬೇರೆ ರೋಗಗಳಿಗೆ ನೀಡುವ ಔಷಧಿ, ಮಾತ್ರೆ, ಇಂಜೆಕ್ಷನ್‌ನ ಅವಧಿಯೂ ಮುಕ್ತಾಯವಾಗಿದೆ. ಇವುಗಳ ಮೌಲ್ಯವು ಲಕ್ಷಾಂತರ ರೂಪಾಯಿ ಆಗಿವೆ. ಈ ಅಪಾರ ಪ್ರಮಾಣ ನಷ್ಟ ಸರ್ಕಾರಕ್ಕೆ ಉಂಟಾಗಿದೆ.





**ಏನಿದು ಮೆಡಿಕಲ್ ಮಾಫಿಯಾ?:** ಮಂಡ್ಯದ ಮಿಮ್ಸ್ ಸೇರಿದಂತೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಒಂದಷ್ಟು ಮೆಡಿಸಿನ್ ಏಜೆನ್ಸಿಗಳು ಔಷಧಿ, ಇಂಜೆಕ್ಷನ್, ಮಾತ್ರೆಗಳು ಸೇರಿದಂತೆ ಇನ್ನಿತರ ವಸ್ತುಗಳನ್ನು ಸರಬರಾಜು ಮಾಡುತ್ತವೆ. ಈ ಸರಬರಾಜು ಆದ ಮೆಡಿಸಿನ್‌ಗಳ ಅವಧಿ ಮುಕ್ತಾಯದ ಎರಡು ಅಥವಾ ಮೂರು ತಿಂಗಳ ಮುಂಚೆಯೇ ಆಯಾ ಏಜೆನ್ಸಿ ಅವರಿಗೆ ಆ ಮೆಡಿಸಿನ್‌ನ್ನು ವಾಪಸ್ಸು ನೀಡಿದ್ರೆ, ಅವರು ಹೊಸ ಮೆಡಿಸಿನ್‌ನ್ನು ನೀಡ್ತಾರೆ. ಅಲ್ಲಿಗೆ ಯಾವುದೇ ಹಣ ವ್ಯಯವಾಗುವುದಿಲ್ಲ.

ಈ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳು ಮಾಡದೇ ಏಜೆನ್ಸಿ ಅವರೊಂದಿಗೆ ಒಪ್ಪಂದ ಮಾಡಿಕೊಂಡು ಮೆಡಿಸಿನ್‌ಗಳು ಅವಧಿ ಮುಗಿಯುವವರೆಗೆ ತಮ್ಮಲ್ಲೇ ಇಟ್ಟುಕೊಳ್ಳುತ್ತಾರೆ. ಈಗ ಆ ಮೆಡಿಸಿನ್‌ಗಳನ್ನು ಸಂಬಂಧಪಟ್ಟ ಏಜೆನ್ಸಿ ವಾಪಸ್ಸು ಪಡೆಯುವುದಿಲ್ಲ. ಈ ಮೂಲಕ ಸರ್ಕಾರದ ಬೊಕ್ಕಸಕ್ಕೆ ಕತ್ತರಿ ಬೀಳ್ತಾ ಇದೆ.

ಡ್ರಗ್‌ಗೆ ಸಂಬಂಧಿಸಿದ ಅಧಿಕಾರಿಗಳು ಮೊದಲೇ ಏಜೆನ್ಸಿ ಅವರೊಂದಿಗೆ ಮಾತಾಡಿಕೊಂಡು ಎರಡು ತಿಂಗಳಲ್ಲಿ ಅವಧಿ ಮುಗಿಯುವ ಮೆಡಿಸಿನ್‌ನ್ನು ಕೊಡಲು ಹೇಳ್ತಾರೆ. ಎರಡು ತಿಂಗಳು ಅವಧಿ ಮುಗಿಯುವ ಮೆಡಿಸಿನ್‌ಗೆ ಏಜೆನ್ಸಿ ಅವರು ಬಾರಿ ರಿಯಾಯಿತಿಯನ್ನು ಕೊಡ್ತಾರೆ. ಉದಾಹರಣೆಗೆ 10 ರೂ. ಒಂದು ಮಾತ್ರೆ ಎರಡು ತಿಂಗಳಲ್ಲಿ ಅವಧಿ ಮುಗಿಯುತ್ತಿದ್ರೆ, ಅದಕ್ಕೆ ಕೇವಲ ಮೂರು ರೂಪಾಯಿಯನ್ನು ಬಿಲ್ ಮಾಡ್ತಾರೆ. ಈ ಮೆಡಿಸಿನ್‌ನ್ನು ಖರೀದಿ ಮಾಡುವ ಅಧಿಕಾರಿಗಳು ಏಜೆನ್ಸಿ ಅವರಿಗೆ 3 ರೂ. ನೀಡಿ, ಸರ್ಕಾರಕ್ಕೆ 10 ರೂ. ಬಿಲ್ ತೋರಿಸುತ್ತಾರೆ. ಆ ಮೂಲಕ ಮೆಡಿಸಿನ್ ಮಾಫಿಯಾ ಮೂಲಕ ಲಕ್ಷಾಂತರ ರೂ. ಹಣ ಸರ್ಕಾರದ ಜೇಬಿಗೆ ಕತ್ತರಿ ಬೀಳ್ತಾ ಇದೆ.

# ಮಾರ್ನೆ ಮಾರ್ಕೆಲ್ ಈಗ ಟೀಂ ಇಂಡಿಯಾದ ಬೌಲಿಂಗ್ ಕೋಚ್

ದಕ್ಷಿಣ ಆಫ್ರಿಕಾದ ಮಾಜಿ ಕ್ರಿಕೆಟಿಗ, ವೇಗಿ ಬೌಲರ್ ಮಾರ್ನೆ ಮಾರ್ಕೆಲ್ ಭಾರತ ಕ್ರಿಕೆಟ್ ತಂಡಕ್ಕೆ ಬೌಲಿಂಗ್ ಕೋಚ್ ಆಗಿ ನೇಮಕವಾಗಿದ್ದಾರೆ.

ಈ ಹಿಂದೆ ಮಾರ್ಕೆಲ್ ಅವರು 2023ರ ಏಕದಿನ ವಿಶ್ವಕಪ್ ಸಮಯದಲ್ಲಿ ಪಾಕಿಸ್ತಾನದ ಕ್ರಿಕೆಟ್ ತಂಡಕ್ಕೆ ಬೌಲಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು. ಐಪಿಎಲ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್, ಲಕ್ನೋ ಸೂಪರ್ ಜೈಂಟ್ಸ್ ಮತ್ತು ಡೆಲ್ಲಿ ಡೇರ್‌ಡೇವಿಲ್ಸ್ ತಂಡಗಳಲ್ಲಿ ಆಟವಾಡಿದ್ದರು.

ಭಾರತ ತಂಡದ ಹೊಸ ಕೋಚ್ ಆಗಿರುವ ಗೌತಮ್ ಗಂಭೀರ್ ಸಲಹೆಯ ಮೇರೆಗೆ ಮಾರ್ಕೆಲ್ ಅವರನ್ನು ಆಯ್ಕೆ ಮಾಡಲಾಗಿದೆ. ಲಕ್ನೋ ತಂಡದಲ್ಲಿ ಗೌತಮ್ ಗಂಭೀರ್ ಮತ್ತು ಮಾರ್ಕೆಲ್ ಜೊತೆಯಾಗಿ ಕೆಲಸ ಮಾಡಿದ್ದರು.

39 ವರ್ಷದ ಮಾರ್ಕೆಲ್ ದಕ್ಷಿಣ ಆಫ್ರಿಕಾ ಪರವಾಗಿ 86 ಟೆಸ್ಟ್, 117 ಏಕದಿನ, 44 ಟಿ20 ಪಂದ್ಯಗಳನ್ನಾಡಿ ಒಟ್ಟು 544 ವಿಕೆಟ್‌ಗಳು ಪಡೆದಿದ್ದಾರೆ.



Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com

# ಕೇಜ್ರಿವಾಲ್‌ಗೆ ಜಾಮೀನು ನೀಡಲು ನಿರಾಕರಿಸಿದ ಸುಪ್ರೀಂ ಕೋರ್ಟ್



**ನವದೆಹಲಿ:** ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಗೆ ಜಾಮೀನು ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಬಂಧನ ಪ್ರಶ್ನಿಸಿ ಜಾಮೀನು ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಬಳಿಕ ಕೋರ್ಟ್ ಸಿಬಿಐಗೆ ನೋಟಿಸ್ ಜಾರಿ ಮಾಡಿದೆ.

ನ್ಯಾ.ಸೂರ್ಯಕಾಂತ್ ನೇತೃತ್ವದ ದ್ವಿ ಸದಸ್ಯ ಪೀಠದಲ್ಲಿ ಅರ್ಜಿ ವಿಚಾರಣೆ ನಡೆಸಲಾಯಿತು. ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ, ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ಸೆಕ್ಷನ್ 45ರ ಕಠಿಣತೆಯ ಹೊರತಾಗಿಯೂ ಮನಿ ಲಾಂಡರಿಂಗ್ ಪ್ರಕರಣದಲ್ಲಿ ಕೇಜ್ರಿವಾಲ್ ಮೂರು ಸಂದರ್ಭಗಳಲ್ಲಿ ಮಧ್ಯಂತರ ಜಾಮೀನು ಪಡೆದಿದ್ದಾರೆ ಎಂದು ಇಡಿ ಪ್ರಕರಣವನ್ನು ಉಲ್ಲೇಖಿಸಿದರು.

ಪಿಎಂಎಲ್‌ಎಯ ಕಟ್ಟುನಿಟ್ಟಿನ ನಿಬಂಧನೆಗಳ ಅಡಿಯಲ್ಲಿ ಕೇಜ್ರಿವಾಲ್ ಜಾಮೀನು ಪಡೆದಿದ್ದಾರೆ. ಭ್ರಷ್ಟಾಚಾರ ತಡೆ ಕಾಯ್ದೆಯು ಮನಿ ಲಾಂಡರಿಂಗ್ ಕಾನೂನಿನಂತೆ ಕಠಿಣ ಷರತ್ತುಗಳನ್ನು ಹೊಂದಿಲ್ಲದ ಕಾರಣ ಸಿಬಿಐ ಪ್ರಕರಣದಲ್ಲಿ ಅವರಿಗೆ ಸಾಮಾನ್ಯ ಜಾಮೀನನ್ನು ಹೇಗೆ ನಿರಾಕರಿಸಬಹುದು ಎಂದು ಸಿಂಘ್ವಿ ಆಶ್ಚರ್ಯ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾ.ಸೂರ್ಯಕಾಂತ್, ನಾವು ಯಾವುದೇ ಮಧ್ಯಂತರ ಜಾಮೀನು ನೀಡುತ್ತಿಲ್ಲ. ಈ ಸಂಬಂಧ ಸಿಬಿಐಗೆ ನೋಟಿಸ್ ನೀಡುತ್ತಿದ್ದೇವೆ. ಅಗಸ್ಟ್ 23ರ ಒಳಗೆ ಅವರು ಪ್ರತಿಕ್ರಿಯೆ ನೀಡಲಿ ಎಂದು ವಿಚಾರಣೆ ಮುಂದೂಡಿದರು. ಹೈಕೋರ್ಟ್ ಜಾಮೀನು ನಿರಾಕರಿಸಿದ ಬಳಿಕ ಕೇಜ್ರಿವಾಲ್ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ.

# ಅಕ್ರಮವಾಗಿ ಭಾರತ ಪ್ರವೇಶಿಸಿದ 16 ಬಾಂಗ್ಲಾ ಪ್ರಜೆಗಳ ಬಂಧನ



**ಅಗರ್ತಲ:** ಅಕ್ರಮವಾಗಿ ಭಾರತವನ್ನು ಪ್ರವೇಶಿಸಿದ 16 ಬಾಂಗ್ಲಾದೇಶದ ಪ್ರಜೆಗಳನ್ನು ಪೊಲೀಸರು ಬಂಧಿಸಿದ ಘಟನೆ ತ್ರಿಪುರಾದ ಅಗರ್ತಲಾ ರೈಲ್ವೆ ನಿಲ್ದಾಣದಲ್ಲಿ ನಡೆದಿದೆ.

ಬಂಧಿತರಲ್ಲಿ ಮೂವರು ಮಹಿಳೆಯರು. 16 ಬಾಂಗ್ಲಾದೇಶಿ ಪ್ರಜೆಗಳನ್ನು ಮಂಗಳವಾರ ರಾತ್ರಿ ಅಗರ್ತಲಾ ರೈಲು ನಿಲ್ದಾಣದಿಂದ ಸರ್ಕಾರಿ ರೈಲ್ವೆ ಪೊಲೀಸರು (ಜಿಆರ್‌ಪಿ) ರೈಲು ಹತ್ತುವ ಮೊದಲು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಗರ್ತಲಾ ರೈಲು ನಿಲ್ದಾಣವು ಬಾಂಗ್ಲಾದೇಶದ ಗಡಿಯಿಂದ ಸುಮಾರು 6 ಕಿ.ಮೀ ದೂರದಲ್ಲಿದೆ. ಬಂಧಿತರು ಬಾಂಗ್ಲಾದಲ್ಲಿ ನಡೆಯುತ್ತಿರುವ ಹಿಂಸಾಚಾರದಿಂದ ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳಲು ಮತ್ತು ಉದ್ಯೋಗದ ಹುಡುಕಾಟದಲ್ಲಿ ಭಾರತಕ್ಕೆ ಪ್ರವೇಶಿಸಿರುವುದಾಗಿ ವಿಚಾರಣೆ ವೇಳೆ ತಿಳಿಸಿದ್ದಾರೆ.

20 ರಿಂದ 40 ವರ್ಷ ವಯಸ್ಸಿನ 16 ಬಾಂಗ್ಲಾದೇಶೀಯರಲ್ಲಿ ಹದಿಮೂರು ಮಂದಿ ರಾಜಶಾಹಿ ವಿಭಾಗದ ಚಪೈನವಾಬ್‌ಗಂಜ್ ಜಿಲ್ಲೆಯ ನಿವಾಸಿಗಳಾಗಿದ್ದರೆ, ಉಳಿದ ಮೂವರು ಢಾಕಾ ವಿಭಾಗದ ಗಾಜಿಪುರ ಜಿಲ್ಲೆಯ ನಿವಾಸಿಗಳು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕಳೆದ ಮೂರು ತಿಂಗಳಿನಿಂದ ಅಕ್ರಮವಾಗಿ ಭಾರತಕ್ಕೆ ಪ್ರವೇಶಿಸಿದ್ದಕ್ಕಾಗಿ ಸುಮಾರು 250 ಬಾಂಗ್ಲಾದೇಶಿ ಪ್ರಜೆಗಳು ಮತ್ತು 32 ರೋಹಿಂಗ್ಯಾಗಳನ್ನು ಜಿಆರ್‌ಪಿ, ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಮತ್ತು ತ್ರಿಪುರ ಪೊಲೀಸರು ಅಗರ್ತಲಾ ರೈಲು ನಿಲ್ದಾಣ ಮತ್ತು ತ್ರಿಪುರದ ವಿವಿಧ ಸ್ಥಳಗಳಿಂದ ಬಂಧಿಸಿದ್ದಾರೆ.

# ಆಂಧ್ರದಲ್ಲಿ ಟಿಡಿಪಿ ನಾಯಕನ ಬರ್ಬರ ಹತ್ಯೆ..!

**ತೆಲಂಗಾಣ:** ತೆಲಂಗಾಣದ ಕರ್ನೂಲ್ ಜಿಲ್ಲೆಯಲ್ಲಿ ತೆಲುಗು ದೇಶಂ ಪಕ್ಷದ (ಟಿಡಿಪಿ) ನಾಯಕನನ್ನು ಅಪರಿಚಿತ ದುಷ್ಕರ್ಮಿಗಳು ಚಾಕುವಿನಿಂದ ಹಲ್ಲೆ ನಡೆಸಿ ಕೊಲೆ ಮಾಡಿದ್ದು, ಇದೀಗ ಈ ಕೊಲೆಯ ಹಿಂದೆ ಸಾಕಷ್ಟು ಆರೋಪಗಳು ಕೇಳಿ ಬರುತ್ತಿದೆ. ವರದಿಯ ಪ್ರಕಾರ, ಎಂದು ಬೆಳಗ್ಗೆ ಟಿಡಿಪಿ ಮುಖಂಡ, ವಕಿಟಿ ಶ್ರೀನಿವಾಸುಲು ಕರ್ನೂಲ್ನ ಪಟ್ಟಿಕೊಂಡ



ಉಪವಿಭಾಗದ ಹೊಸೂರಿನಲ್ಲಿರುವ ತಮ್ಮ ಜಮೀನಿಗೆ ಹೋಗುತ್ತಿರುವ ವೇಳೆ ದುಷ್ಕರ್ಮಿಗಳು ಚಾಕುವಿನಿಂದ ಮಾರಣಾಂತಿಕ ಹಲ್ಲೆ ನಡೆಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ. ಈ ಘಟನೆಯ ನಂತರ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ಉಂಟಾಗಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ವರದಿಯಾಗಿದೆ. ಈ ಬಗ್ಗೆ ಕರ್ನೂಲ್ನ ಪೊಲೀಸ್ ವರಿಷ್ಠಾಧಿಕಾರಿ ಗರಿಕಾಪತಿ ಬಿಂದು ಮಾಧವ್ ಮಾತನಾಡಿದ್ದು, ಕೊಲೆಯನ್ನು ಎಲ್ಲಾ ರೀತಿಯಲ್ಲಿ ತನಿಖೆ ಮಾಡಲು ಆರಂಭಿಸಿದ್ದೇವೆ, ಪೊಲೀಸ್ ತಂಡಗಳು ಘಟನೆ ನಡೆದ ಸ್ಥಳದ ಬಳಿ ದುಷ್ಕರ್ಮಿಗಳ ಬಗ್ಗೆ ಕೆಲವು ಸಾಕ್ಷಿಗಳು ದೊರಕಿದ್ದು, ಪ್ರಕರಣದ ಹೆಚ್ಚಿನ ತನಿಖೆ ನಡೆಸುತ್ತಿದೆ. ಈ ಬಗ್ಗೆ ಮಾತನಾಡಿದ ಟಿಡಿಪಿ ಪಕ್ಷದ ಮುಖಂಡ ನಾರಾ ಲೋಕೇಶ್ ಪ್ರತಿಕಿಯಿಸಿದ್ದು, ವಕಿಟಿ ಶ್ರೀನಿವಾಸುಲು ಚಾಕುವಿನಿಂದ ಅಮಾನುಷವಾಗಿ ಹತ್ಯೆ ಮಾಡಲಾಗಿದೆ. ಈ ಘಟನೆಯಲ್ಲಿ ವೈಎಸ್‌ಆರ್‌ಸಿಪಿ ಕಾರ್ಯಕರ್ತರ ಕೈವಾಡವಿದೆ ಎಂದು ಗಂಭೀರವಾಗಿ ಆರೋಪಿಸಿದ್ದಾರೆ.

# ರಿಲಯನ್ಸ್ ಫೌಂಡೇಷನ್‌ನಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಘೋಷಣೆ; ಅಕ್ಟೋಬರ್ 6ಕ್ಕೆ ಕೊನೇ ದಿನ

**ಮುಂಬೈ:** ರಿಲಯನ್ಸ್ ಫೌಂಡೇಷನ್ ನಿಂದ 2024-25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿ ವೇತನವನ್ನು ವಿತರಿಸುವುದಕ್ಕಾಗಿ ಅರ್ಜಿಗಳನ್ನು ಕರೆದಿರುವುದಾಗಿ ಘೋಷಣೆ ಮಾಡಿದೆ. ಈ ಮೂಲಕವಾಗಿ ಭಾರತದಾದ್ಯಂತ ಪದವಿ ಶಿಕ್ಷಣ ಮತ್ತು ಸ್ನಾತಕೋತ್ತರ ಪದವಿ ಅಭ್ಯಾಸ ಮಾಡುತ್ತಿರುವ 5,100 ಅತ್ಯುತ್ತಮ ವಿದ್ಯಾರ್ಥಿಗಳನ್ನು ಗುರುತಿಸಿ, ಬೆಂಬಲಿಸಿ, ಮಾರ್ಗದರ್ಶನ ನೀಡಲಾಗುತ್ತದೆ. ರಿಲಯನ್ಸ್ ಫೌಂಡೇಷನ್ ವಿದ್ಯಾರ್ಥಿ ವೇತನದ ಗುರಿ ಏನೆಂದರೆ, ಭಾರತ ಬೆಳವಣಿಗೆ ಗಾಥೆಯನ್ನು ಮುನ್ನಡೆಸುವುದರಲ್ಲಿ ಮುಂಚೂಣಿಯಲ್ಲಿ ಇರುವುದಕ್ಕೆ ಯುವ ಜನರನ್ನು ಸಬಲಗೊಳಿಸುವುದು, ಉತ್ಕೃಷ್ಟತೆಯನ್ನು ಪೋಷಿಸುವ ಗುರಿಯನ್ನು ಇರಿಸಿಕೊಂಡಿದೆ., ಆ ಮೂಲಕ ಆರ್ಥಿಕ ಹೊರೆಯಿಲ್ಲದೆ ತಮ್ಮ ಅಧ್ಯಯನವನ್ನು ಮುಂದುವರಿಸಲು ಸಬಲಗೊಳಿಸುತ್ತದೆ.

ರಿಲಯನ್ಸ್ ಫೌಂಡೇಷನ್ ಸ್ನಾತಕೋತ್ತರ ಸ್ಕಾಲರ್‌ಶಿಪ್ಗಳು ನವಭಾರತ ನಿರ್ಮಾಣಕ್ಕೆ ಕೊಡುಗೆ ನೀಡುವ ಸಾಮರ್ಥ್ಯ ಹೊಂದಿರುವ, ಭವಿಷ್ಯಕ್ಕೆ ಉಪಯುಕ್ತವಾದ ಎಂಜಿನಿಯರಿಂಗ್, ತಂತ್ರಜ್ಞಾನ, ಇಂಧನ ಮತ್ತು ಜೀವ ವಿಜ್ಞಾನ ಈ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿರುವ 100 ಅಸಾಧಾರಣ- ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತದೆ. ಎಲ್ಲ ವಿದ್ಯಾರ್ಥಿವೇತನಗಳನ್ನು ಶೈಕ್ಷಣಿಕ ಅರ್ಹತೆ ಮತ್ತು ಆರ್ಥಿಕ ಸ್ಥಿತಿಯ ಆಧಾರದ ಮೇಲೆ ನೀಡಲಾಗುತ್ತದೆ ಮತ್ತು ಪದವಿ ಕಾರ್ಯಕ್ರಮಗಳ ಅವಧಿಯನ್ನು ಒಳಗೊಂಡಿರುತ್ತದೆ. ಸಮಾಜದ ಪ್ರಯೋಜನಕ್ಕಾಗಿ ದೊಡ್ಡದಾಗಿ ಯೋಚಿಸುವ, ಹಸಿರು ಮತ್ತು ಡಿಜಿಟಲ್ ಚಿಂತನೆ ಮಾಡುವ ಅಸಾಧಾರಣ ಪ್ರತಿಭೆಗಳನ್ನು ಗುರುತಿಸಲು ಮತ್ತು ಬೆಳವಣಿಗೆಗೆ ನೆರವು ನೀಡುವುದಕ್ಕಾಗಿ ಈ ಉಪಕ್ರಮವನ್ನು ರೂಪಿಸಲಾಗಿದೆ.

ಸಮಗ್ರವಾದ ಬೆಂಬಲ ಹಾಗೂ ಉದಾರವಾದ ಹಣಕಾಸಿನ ಅನುದಾನದ ಮೂಲಕವಾಗಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಹಾಗೂ ವೃತ್ತಿಪರ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳುವುದಕ್ಕೆ ಈ ವಿದ್ಯಾರ್ಥಿವೇತನವು ನೆರವು ನೀಡುತ್ತದೆ. ಮೊದಲ ವರ್ಷದ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಾಗಿದ್ದು, ಭಾರತದೊಳಗೆ ಇರುವಂಥ ಶಿಕ್ಷಣ ಸಂಸ್ಥೆಯಿಂದ ಪೂರ್ಣಾವಧಿಗೆ, ನಿಯಮಿತ ಶಿಕ್ಷಣ ಪಡೆಯುತ್ತಿರುವಂಥವರು ಅರ್ಜಿ ಸಲ್ಲಿಸುವುದಕ್ಕೆ ಅರ್ಹರಾಗಿರುತ್ತಾರೆ.

ರಿಲಯನ್ಸ್ ಫೌಂಡೇಷನ್ ಪದವಿ ಶಿಕ್ಷಣ ಪಡೆಯುತ್ತಿರುವವರಿಗೆ ನೀಡುವ ವಿದ್ಯಾರ್ಥಿ ವೇತನವು ಪ್ರತಿಭಾವಂತ ವಿದ್ಯಾರ್ಥಿಗಳು ಯಶಸ್ವಿ ವೃತ್ತಿಪರರಾಗುವ ತಮ್ಮ ಕನಸು ನನಸಾಗಿಸಿಕೊಳ್ಳುವುದಕ್ಕೆ ಮತ್ತು ಭಾರತದ ಭವಿಷ್ಯದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ಕೊಡುಗೆ ನೀಡುವ ನಿಟ್ಟಿನಲ್ಲಿ ಅವರ ಸಾಮರ್ಥ್ಯವನ್ನು ಹೊರತರುವುದಕ್ಕೆ ಪ್ರಯತ್ನಿಸುತ್ತದೆ. ಪದವಿ ಕಾಲೇಜು ಶಿಕ್ಷಣಕ್ಕಾಗಿ ಅಂಕ ಆರ್ಥಿಕ ಸ್ಥಿತಿಯ ಮಾನದಂಡದ ಆಧಾರದ ಮೇಲೆ 5,000 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು ವಿದ್ಯಾರ್ಥಿಗಳು www.scholarships.reliancefoundation.org ಈ ವೆಬ್ ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

# ಬಾಂಗ್ಲಾದೇಶದಲ್ಲಿ ನಿಲ್ಲದ ಹಿಂದೂಗಳ ಮೇಲಿನ ದಾಳಿ



**ಢಾಕಾ:** ಹಿಂಸಾಪೀಡಿತ ಬಾಂಗ್ಲಾ ದೇಶದಲ್ಲಿ ಹಿಂದೂಗಳ ಮೇಲಿನ ದಾಳಿ ಮುಂದುವರಿದಿದೆ. ವಾಯವ್ಯ ಬಾಂಗ್ಲಾದೇಶದ ಹಿಂದೂ ಸಮುದಾ ಯಕ್ಕೆ ಸೇರಿದ ವ್ಯಕ್ತಿಯ ಮನೆಗೆ ಬೆಂಕಿ ಹಚ್ಚಲಾಗಿದೆ. ಸುದ್ದಿ ತಿಳಿದ ಕೂಡಲೇ ಸ್ಥಳೀಯರು ಧಾವಿಸಿ ಬೆಂಕಿ ನಂದಿಸಿದ್ದಾರೆ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಧ್ಯಾಂತರ ಸರಕಾರದ ಮುಖ್ಯಸ್ಥ ಮೊಹಮ್ಮದ್ ಯೂನುಸ್ ಹಿಂದೂಗಳ ರಕ್ಷಣೆಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ವಾಗ್ದಾನ ಮಾಡಿದ್ದರೂ ಈ ಘಟನೆ ನಡೆದಿದೆ.

**ಅಂ.ರಾ. ಕೋರ್ಟ್‌ಲ್ಲಿ ವಿಚಾರಣೆ:** ಶೇಖ್ ಹಸೀನಾ ಸರಕಾರದ ವಿರುದ್ಧ ವಿದ್ಯಾರ್ಥಿಗಳು ನಡೆಸಿದ ಬೃಹತ್ ಪ್ರತಿಭಟನೆಯ ಸಮಯದಲ್ಲಿ ಕೊಲೆ ನಡೆಸಿದವರ ವಿರುದ್ಧ ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಸುವುದಾಗಿ ಬಾಂಗ್ಲಾದ ಮಧ್ಯಾಂತರ ಸರಕಾರ ಘೋಷಣೆ ಮಾಡಿದೆ. ವಿಶ್ವ ಸಂಸ್ಥೆಯಡಿಯಲ್ಲಿ ತನಿಖೆ ನಡೆಸಲು ಮಧ್ಯಾಂತರ ಸರಕಾರ ಸಿದ್ಧತೆ ನಡೆಸಿದೆ.

## ಶೇಖ್ ಹಸೀನಾ ವಿರುದ್ಧ ಮತ್ತೊಂದು ಕೇಸ್

**ಬಾಂಗ್ಲಾ ದೇಶ:** ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಮತ್ತೊಂದು ಕೇಸ್ ದಾಖಲು

ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ವಿರುದ್ಧ ಕೊಲೆ ಪ್ರಕರಣದ ತನಿಖೆಗೆ ಕೋರ್ಟ್ ಆದೇಶಿಸಿದ ಬೆನ್ನಲ್ಲೇ ಹಸೀನಾ ಮೇಲೆ ಬುಧವಾರ ಮತ್ತೊಂದು ಅಪರಾಧ ಪ್ರಕರಣ ದಾಖಲಾಗಿದೆ.

2015ರಲ್ಲಿ ವಕೀಲರೊಬ್ಬರನ್ನು ಅಪಹರಿಸಿದ ಆರೋಪದಲ್ಲಿ ಹಸೀನಾ ಮತ್ತು ಅವರ ಸಂಪುಟದ ಮಾಜಿ ಸಚಿವರು ಸೇರಿದಂತೆ ಹಲವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲು ಢಾಕಾ ಮೆಟ್ರೊಪಾಲಿಟನ್ ನ್ಯಾಯಾಲಯದ ಮ್ಯಾಜಿಸ್ಟ್ರೇಟ್ ಫರ್ಜಾನಾ ಶಕೀಲಾ ಸುಮು ಚೌಧರಿ ಅವರು ನಿರ್ದೇಶಿಸಿದ್ದಾರೆ. ಈ ಪ್ರಕರಣದ ಸಂತ್ರಸ್ತ, ಸುಪ್ರೀಂ ಕೋರ್ಟ್ ವಕೀಲ ಸೊಹೆಲ್ ರಾಣಾ ದೂರು ಸಲ್ಲಿಸಿದ್ದಾರೆ ಎಂದು 'ಡೈಲಿ ಸ್ಟಾರ್' ಪತ್ರಿಕೆ ವರದಿ ಮಾಡಿದೆ.



ಹಸೀನಾ ಅವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಅಸಾದುಝುಮಾನ್ ಖಾನ್, ಮಾಜಿ ಕಾನೂನು ಸಚಿವ ಅನಿಸುಲ್ ಹಕ್, ಮಾಜಿ ಐಜಿಪಿ ಶಾಹಿದುಲ್ ಹಕ್, ಕ್ಷಿಪ್ರ ಕಾರ್ಯಾಚರಣೆ ಬೆಟಾಲಿಯನ್ನ (ಆರ್ ಎಬಿ) ಮಾಜಿ ಡಿಜಿ ಬೆನಜೀರ್ ಅಹ್ಮದ್ ಮತ್ತು ಆರ್‌ಎಬಿಗೆ ಸಂಬಂಧಿಸಿದ 25 ಮಂದಿ ಅಪರಿಚಿತರ ವಿರುದ್ಧ ವಕೀಲನನ್ನು ಬಲವಂತವಾಗಿ ಕಣ್ಮರೆ ಮಾಡಿದ್ದ ಆಪಾದನೆಯ ದೂರು ದಾಖಲಾಗಿದೆ.

2015ರ ಫೆಬ್ರುವರಿ 10ರಂದು ನನ್ನನ್ನು ಉತ್ತರಾದಲ್ಲಿನ ಸೆಕ್ಟರ್ 5ರಿಂದ ಬಂಧಿಸಿದ್ದರು. ಬಲವಂತವಾಗಿ ವಾಹನಕ್ಕೆ ಹತ್ತಿಸಿಕೊಂಡು, ನನ್ನ ಕಿವಿಗಳು ಮತ್ತು ಜನನಾಂಗಕ್ಕೆ ವಿದ್ಯುತ್ ಶಾಕ್ ನೀಡಿದ್ದರು. ಇದರಿಂದ ನಾನು ಪ್ರಜ್ಞೆ ಕಳೆದುಕೊಂಡಿದ್ದೆ. ನಂತರವೂ ಹಲವು ದಿನಗಳ ಕಾಲ ಕ್ರೂರವಾಗಿ ಹಿಂಸಿಸಿದರು. ಅವರ ಚಿತ್ರಹಿಂಸೆಗಳನ್ನು ಸಹಿಸಿಕೊಂಡ ನಂತರ ಅಂತಿಮವಾಗಿ ಅದೇ ವರ್ಷದ ಆಗಸ್ಟ್‌ನಲ್ಲಿ ರಾಜ್ಶಾಹಿಯ ಗೋದಾಗರಿಯಲ್ಲಿ ನನ್ನನ್ನು ಬಿಡುಗಡೆ ಮಾಡಿದರು ಎಂದು ದೂರಿನಲ್ಲಿ ತಿಳಿಸಿರುವುದಾಗಿ ವರದಿಯಾಗಿದೆ.

# ಅಧಿಕಾರದಿಂದ ಥೈಲ್ಯಾಂಡ್ ಪ್ರಧಾನಿ ಶ್ರೆತ್ತಾ ಥವಿಸಿನ್ ಕಿತ್ತೆಸೆದ ನ್ಯಾಯಾಲಯ

**ಬಾಂಗ್ಲದೇಶ:** ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಕ್ ಹಸೀನಾ ರಾಜಿನಾಮೆ ಕೊಟ್ಟ ಬೆನ್ನಲ್ಲೇ ಇದೀಗ ಥೈಲ್ಯಾಂಡ್ ಪ್ರಧಾನಿ ಶ್ರೆತ್ತಾ ಥವಿಸಿನ್ ಅವರನ್ನು ಅಧಿಕಾರದಿಂದ ತೆಗೆದುಹಾಕಲಾಗಿದೆ. ಸಂವಿಧಾನಿಕ ನಿಯಮವನ್ನು ಉಲ್ಲಂಘಿಸಿದ್ದಕ್ಕಾಗಿ ಥೈಲ್ಯಾಂಡ್ನ ಸಂವಿಧಾನಿಕ ನ್ಯಾಯಾಲಯ ಪ್ರಧಾನಿ ಶ್ರೆತ್ತಾ ಥಾವಿಸಿನ್ ಅವರ ವಿರುದ್ಧ ಮತ ಹಾಕಿ ಅವರನ್ನು ಅಧಿಕಾರದಿಂದ ಕಿತ್ತೆಸೆದಿದೆ. ಪ್ರಧಾನಿ ಶ್ರೆತ್ತಾ ಥಾವಿಸಿನ್ ಅಪರಾಧ ಹಿನ್ನೆಲೆಯೊಳ್ಳ ವ್ಯಕ್ತಿಯೊಬ್ಬರನ್ನು ಸಚಿವ ದರ್ಜೆಯ ಹುದ್ದೆಗೆ ನೇಮಕ ಮಾಡುವ ಮೂಲಕ ಸಂವಿಧಾನದ ನಿಯಮವನ್ನು ಉಲ್ಲಂಘಿಸಲಾಗಿದೆ ಎಂದು ಈ ಕ್ರಮಕೈಗೊಳ್ಳಲಾಗಿದೆ. ಮಹತ್ವದ ಬೆಳವಣಿಗೆಯೊಂದರಲ್ಲಿ ಇಂದು ಥೈಲ್ಯಾಂಡ್ನ ಸಾಂವಿಧಾನಿಕ ನ್ಯಾಯಾಲಯ ಪ್ರಧಾನಿ ಶ್ರೆತ್ತಾ ಥಾವಿಸಿನ್ ಅವರನ್ನು ಅನರ್ಹಗೊಳಿಸಲು ಮತ ಚಲಾಯಿಸಿತು. ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಯನ್ನು ಕ್ಯಾಬಿನೆಟ್ ದರ್ಜೆಗೆ ನೇಮಕ ಮಾಡುವ ಮೂಲಕ ಅವರು ನೈತಿಕ ಮಾನದಂಡಗಳನ್ನು ಉಲ್ಲಂಘಿಸಿದ್ದಾರೆ ಎಂದು ತೀರ್ಪು ನೀಡಿದ ಕೋರ್ಟ್ ಅವರನ್ನು ಕೂಡಲೇ ಮತದಾನ ಮಾಡಿ ವಜಾ ಮಾಡಿದೆ. 5-4 ಮತಗಳೊಂದಿಗೆ ಶ್ರೆತ್ತಾ ಸಚಿವ ಸಂಪುಟದಲ್ಲಿರು ಎಲ್ಲಾ ಸಚಿವ ಸ್ಥಾನಗಳನ್ನು ಜೊತೆಗೆ ವಜಾಗೊಳಿಸಲಾಗಿದೆ. ರಾಜಕೀಯ ಬದಲಾವಣೆಯ ಈ ಸಮಯದಲ್ಲಿ ಉಪಪ್ರಧಾನಿ ಮತ್ತು ವಾಣಿಜ್ಯ ಸಚಿವ ಫುಮ್ತಾಮ್ ವೆಚಯಾಚೈ ಅವರು ಹಂಗಾಮಿ ಪ್ರಧಾನ ಮಂತ್ರಿಯಾಗಿ ಕಾರ್ಯನಿರ್ವಹಿಸುತ್ತಾರೆ.



# ಬ್ಲಿಂಕೆನ್ ಮಧ್ಯಪ್ರಾಚ್ಯ ಪ್ರವಾಸ ಮುಂದೂಡಿಕೆ

**ವಾಷಿಂಗ್ಟನ್:** ಅನಿಶ್ಚಿತತೆಯ ನಡುವೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಮಧ್ಯಪ್ರಾಚ್ಯ ಪ್ರವಾಸವನ್ನು



ಮುಂದೂಡಿದ್ದು, ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬಂದರೆ ಗುರುವಾರ ತೆರಳಬಹುದು ಎಂದು ಮೂಲಗಳನ್ನು ಉಲ್ಲೇಖಿಸಿ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಈ ಮಧ್ಯೆ, 20 ಶತಕೋಟಿ ಡಾಲರ್ಗೂ ಹೆಚ್ಚು ಮೊತ್ತದ ಎಫ್-15 ಯುದ್ಧ ವಿಮಾನಗಳು ಹಾಗೂ ಇತರ ಮಿಲಿಟರಿ ಸಾಧನಗಳು, ಸುಮಾರು 774 ದಶಲಕ್ಷ ಡಾಲರ್ ಮೊತ್ತದ ಟ್ಯಾಂಕ್ ಸಿಡಿಮದ್ದುಗಳು, 583 ದಶಲಕ್ಷ ಡಾಲರ್ ಮೊತ್ತದ ಸೇನಾ ವಾಹನಗಳನ್ನು ಇಸ್ರೇಲ್ಗೆ ಒದಗಿಸುವ ಯೋಜನೆಯನ್ನು ಬ್ಲಿಂಕೆನ್ ಅನುಮೋದಿಸಿದ್ದಾರೆ ಎಂದು ವರದಿ ಹೇಳಿದೆ.

# ಫಿಲಿಪ್ಪೀನ್ಸ್: ಮುಳುಗಿದ ಹಡಗಿನಿಂದ ತೈಲ ತೆರವು ಕಾರ್ಯ ಆರಂಭ



**ಮನಿಲಾ :** ಜುಲೈ 25ರಂದು ಮನಿಲಾ ಕೊಲ್ಲಿಯಲ್ಲಿ ಮುಳುಗಿದ್ದ ತೈಲ ಟ್ಯಾಂಕರ್ ಹಡಗಿನಿಂದ ಪರಿಸರ ವಿಪತ್ತು ಸಂಭವಿಸಬಹುದು ಎಂಬ ವರದಿಯ ಹಿನ್ನೆಲೆಯಲ್ಲಿ , ಟ್ಯಾಂಕರ್ನಲ್ಲಿರುವ 1.4 ದಶಲಕ್ಷ ಲೀಟರ್ ಕೈಗಾರಿಕಾ ತೈಲವನ್ನು ತೆರವುಗೊಳಿಸುವ ಪ್ರಕ್ರಿಯೆ ಆರಂಭಗೊಂಡಿರುವುದಾಗಿ ವರದಿಯಾಗಿದೆ.

ಟ್ಯಾಂಕರ್ನಿಂದ ತೈಲವನ್ನು ಒಂದು ವಾರದೊಳಗೆ ತೆರವುಗೊಳಿಸುವ ಕಾಮಗಾರಿಯನ್ನು ಖಾಸಗಿ ಸಂಸ್ಥೆಯೊಂದಕ್ಕೆ ವಹಿಸಲಾಗಿದೆ ಎಂದು ಫಿಲಿಪ್ಪೀನ್ಸ್ ಕರಾವಳಿ ಕಾವಲುಪಡೆ ಹೇಳಿದೆ. ಗೇಮಿ ಚಂಡಮಾರುತದ ಅಬ್ಬರಕ್ಕೆ ಸಿಲುಕಿ ಮನಿಲಾ ಕೊಲ್ಲಿಯಲ್ಲಿ ತೈಲ ಟ್ಯಾಂಕರ್ ಮುಳುಗಿದ್ದು ಹಡಗಿನ ಓರ್ವ ಸಿಬ್ಬಂದಿ ಮೃತಪಟ್ಟಿದ್ದ. ಮುಳುಗಿದ್ದ ಹಡಗಿನಿಂದ ತೈಲ ಸೋರಿಕೆಯನ್ನು ನಿಯಂತ್ರಿಸಲು ಸುಮಾರು 3 ವಾರ ಕಾರ್ಯಾಚರಣೆ ನಡೆಸಲಾಗಿತ್ತು. ಸೋರಿಕೆಯನ್ನು ಬಹುತೇಕ ನಿಯಂತ್ರಿಸಿದ ಬಳಿಕ ತೈಲವನ್ನು ತೆರವುಗೊಳಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಈಗಲೂ ಅಲ್ಪಪ್ರಮಾಣದಲ್ಲಿ ತೈಲ ಸೋರಿಕೆಯಾಗುತ್ತಿದ್ದು ಬಾಧಿತ ಪ್ರದೇಶದ ಮೀನುಗಳನ್ನು ತಿನ್ನುವಾಗ ಎಚ್ಚರಿಕೆ ವಹಿಸುವಂತೆ ಸ್ಥಳೀಯ ಆಡಳಿತ ಜನರನ್ನು ಆಗ್ರಹಿಸಿದೆ.

# ಚಲಿಸುತ್ತಿದ್ದ ರೈಲಿನಲ್ಲಿ ಸಾಹಸಕ್ಕೆ ಮುಂದಾದ ಯುವತಿ

**ಥಾಯ್ಲೆಂಡ್:** ವಿಡಿಯೋ, ರೀಲ್ಸ್ ಹುಚ್ಚಿಗೆ ಅನೇಕರು ಪ್ರಾಣ ಕಳೆದುಕೊಳ್ತಿದ್ದಾರೆ. ಪ್ರತಿ ದಿನ ಇದಕ್ಕೆ ಸಂಬಂಧಿಸಿದ ಅನೇಕ ವಿಡಿಯೋಗಳು ಬರ್ತಿದ್ದರೂ ಜನರಿಗೆ ಬುದ್ಧಿ ಬಂದಿಲ್ಲ. ಈಗ ಮತ್ತೊಂದು ವಿಡಿಯೋ ವೈರಲ್ ಆಗಿದೆ. ರೈಲಿನ ಮೆಟ್ಟಿಲ ಮೇಲೆ ನಿಂತು ವಿಡಿಯೋಕ್ಕೆ ಫೋಸ್ ನೀಡ್ತಿರುವ ಮಹಿಳೆ ಗಾಯಗೊಂಡ ಘಟನೆ ನಡೆದಿದೆ. ಘಟನೆ ಥಾಯ್ಲೆಂಡ್ನಲ್ಲಿ ನಡೆದಿದೆ. ಚಲಿಸುತ್ತಿರುವ ರೈಲಿನಿಂದ ಅಪಾಯಕಾರಿ ಸಾಹಸಕ್ಕೆ ಮಹಿಳೆ ಮುಂದಾಗಿದ್ದಳು. ಫಠಾಲುಂಗ್ ನಿಲ್ದಾಣದ ಬಳಿ ಪೋಸ್ಟ್ ಮಹಿಳೆ ಮುಖಕ್ಕೆ ಹೊಡೆದಿದೆ. ಆಗಸ್ಟ್ 5 ರಂದು ಘಟನೆ ನಡೆದಿದ್ದು, ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಈ ಘಟನೆ ನಂತ್ರ ಸ್ಟೇಟ್ ರೈಲ್ವೇ ಆಫ್ ಥೈಲ್ಯಾಂಡ್ ಸುರಕ್ಷತಾ ಎಚ್ಚರಿಕೆಯನ್ನು ನೀಡಿದೆ. ಪ್ರಯಾಣಿಕರು ಇಂಥ ಅಜಾಗರೂಕ ವರ್ತನೆಯಿಂದ ದೂರವಿರಬೇಕು ಎಂದು ಎಸ್‌ಆರ್‌ಟಿ ಮನವಿ ಮಾಡಿದೆ. ಮಹಿಳೆಗೆ ಸಣ್ಣಪುಟ್ಟ ಗಾಯಗಳಾಗಿದ್ದು ಚಿಕಿತ್ಸೆ ನೀಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



# ಹಿಂಸಾಚಾರಕ್ಕೆ ತಿರುಗಿದ ಕೋಲ್ಕತ್ತಾ ಅತ್ಯಾಚಾರ ಪ್ರತಿಭಟನೆ

ಕೊಲ್ಕತ್ತಾ: ಕೋಲ್ಕತಾ ಆಸ್ಪತ್ರೆಯಲ್ಲಿ ಕರ್ತವ್ಯದಲ್ಲಿದ್ದ ವೈದ್ಯೆಯ ಅತ್ಯಾಚಾರ ಮತ್ತು ಕೊಲೆಯನ್ನು ವಿರೋಧಿಸಿ ಪಶ್ಚಿಮ ಬಂಗಾಳದಾದ್ಯಂತ ಸಾವಿರಾರು ಮಹಿಳೆಯರು ಬುಧವಾರ ಮಧ್ಯರಾತ್ರಿ ಬೀದಿಗಿಳಿದು ಪ್ರತಿಭಟನೆ ನಡೆಸಿದರು.

ಆರ್ಜಿ ಕಾರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ಪ್ರತಿಭಟನೆಯು ನಾಟಕೀಯ ತಿರುವು ಪಡೆದುಕೊಂಡಿತು, ಹೊರಗಿನವರ ಗುಂಪು ಆಸ್ಪತ್ರೆಯ ಆವರಣಕ್ಕೆ ಬಲವಂತವಾಗಿ ಪ್ರವೇಶಿಸಿ ವಾಹನಗಳನ್ನು ಧ್ವಂಸಗೊಳಿಸಿತು.

ಆರ್ ಜಿ ಕಾರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಮಹಿಳಾ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐ ನಡೆಸುತ್ತಿದೆ. ಆಸ್ಪತ್ರೆಯ ಹೊರಗೆ ಹಾಕಲಾಗಿದ್ದ ಬ್ಯಾರಿಕೇಡ್‌ಗಳನ್ನು ಮುರಿದು ಕುರ್ಚಿಗಳನ್ನು ಒಡೆದು ಹಾಕಿದೆ. ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗವನ್ನು ಧ್ವಂಸಗೊಳಿಸಿದ್ದು, ಹೊರಗೆ ನಿಲ್ಲಿಸಿದ್ದ ಕೆಲವು ಪೊಲೀಸ್ ವಾಹನಗಳನ್ನು ಸಹ ಹಾನಿಗೊಳಿಸಲಾಗಿದೆ. ಪೊಲೀಸರು ಗುಂಪನ್ನು ಚದುರಿಸಲು ಲಾಠಿಚಾರ್ಜ್ ನಡೆಸಿ ಅಶ್ರುವಾಯು ಸಿಡಿಸಿದ್ದಾರೆ.



# ಪಾಕ್ ಭಾರತದ ಜೊತೆ ವಿಲೀನವಾಗುತ್ತೆ, ಇಲ್ಲದಿದ್ದರೆ ಅಸ್ತಿತ್ವದಲ್ಲೇ ಇರಲ್ಲ- ಯೋಗಿ



**ಲಖನೌ:** ಕಾಂಗ್ರೆಸ್ ಪಕ್ಷದ ಅಧಿಕಾರ ದಾಹದಿಂದ ದೇಶ ವಿಭಜನೆಯೆಂಬ ಬೆಂಕಿಯ ಕೆನ್ನಾಲಿಗೆ ಇಡೀ ದೇಶವೇ ಹೊತ್ತಿ ಉರಿಯುವಂತಹ ಸ್ಥಿತಿ ನಿರ್ಮಾಣವಾಗಿತ್ತು ಎಂದು ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಎಂದು ವಾಗ್ದಾಳಿ ನಡೆಸಿದ್ದಾರೆ.

ಲಖನೌದಲ್ಲಿ ದೇಶ ವಿಭಜನೆ ಕರಾಳ ದಿನ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದರು.

ಭಯೋತ್ಪಾದನೆಯ ರೂಪದಲ್ಲಿ ಇಂದಿಗೂ ಕಾಟ ಎದುರಿಸುತ್ತಿರುವ ಭಾರತಕ್ಕೆ ಕಾಂಗ್ರೆಸ್ ಪಕ್ಷ ಗಾಯವನ್ನುಂಟು ಮಾಡಿದೆ. ಹಿಂಸಾಚಾರ ಪೀಡಿತ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರು ಎದುರಿಸುತ್ತಿರುವ ದೌರ್ಜನ್ಯದ ಬಗ್ಗೆ ಪ್ರತಿಪಕ್ಷಗಳ ಮೌನದ ಬಗ್ಗೆಯೂ ಅವರು ಪ್ರಶ್ನೆ ಎತ್ತಿದರು.

1947 ರಲ್ಲಿ ಪಾಕಿಸ್ತಾನದಲ್ಲಿ ನಡೆದಿದ್ದು, ಈಗ ಬಾಂಗ್ಲಾದೇಶದಲ್ಲಿ ನಡೆಯುತ್ತಿದೆ. ನಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳು ದೌರ್ಜನ್ಯವನ್ನು ಎದುರಿಸುತ್ತಿದ್ದಾರೆ. ಆದರೆ ರಾಜಕೀಯ ಹಿತಾಸಕ್ತಿಗಳಿಂದಾಗಿ, ಭಾರತದಲ್ಲಿ ಕೆಲವರು ಮೌನ ವಹಿಸುತ್ತಿದ್ದಾರೆ. 1947ರಲ್ಲಿ ಪಾಕಿಸ್ತಾನದಲ್ಲಿ ಮಿಲಿಯನ್ ಹಿಂದೂಗಳು ಮತ್ತು ಸಿಖ್ಖರನ್ನು ಕಗ್ಗೊಲೆ ಮಾಡಲಾಯಿತು. ಇಂದಿಗೂ ನಮ್ಮ ಅಕ್ಕ-ತಂಗಿಯರ ಮೇಲೆ ಅದೇ ರೀತಿಯ ಅತ್ಯಾಚಾರ, ಲೂಟಿ, ದೌರ್ಜನ್ಯಗಳು ನಡೆಯುತ್ತಿವೆ. ಅದೇ ರೀತಿಯ ದುರಂತ ಇಂದಿಗೂ ತೆರೆದುಕೊಳ್ಳುತ್ತಿದೆ. ಬಾಂಗ್ಲಾದೇಶದ 15 ಮಿಲಿಯನ್ ಹಿಂದೂಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹತಾಶವಾಗಿ ಪ್ರಯತ್ನಿಸುತ್ತಿದ್ದಾರೆ ಎಂದು ಸಿಎಂ ಯೋಗಿ ಸೇರಿಸಿದರು.


ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
78ನೇ
ಸ್ವಾತಂತ್ರ್ಯೋತ್ಸವದ
ಶುಭಾಶಯಗಳು
'ನಿಜವಾದ ಸ್ವಾತಂತ್ರ್ಯ ಅಂದರೆ ಕೇವಲ ಕೆಲವರು ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವುದಲ್ಲ,
ಬದಲಾಗಿ ಪ್ರತಿಯೊಬ್ಬರಿಗೂ ಸಾಮರ್ಥ್ಯವನ್ನು ನೀಡುವುದೇ ನಿಜವಾದ ಸ್ವಾತಂತ್ರ್ಯ' - ಮಹಾತ್ಮ ಗಾಂಧೀಜಿ
ಶಕ್ತಿ
ಯೋಜನೆಯಡಿ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಉಚಿತ ಬಸ್ ಪ್ರಯಾಣದ ಟ್ರಿಪ್ ಗಳು 270 ಕೋಟಿ ದಾಟಿದ್ದು, ಇದಕ್ಕಾಗಿ ಸರ್ಕಾರ ಈವರೆಗೂ 6,541 ಕೋಟಿ ರೂ. ವೆಚ್ಚ ಮಾಡಿದೆ.
ಗೃಹ ಜ್ಯೋತಿ
ಯೋಜನೆಯಡಿ ಪ್ರತಿ ಮನೆಗೆ ನೀಡುತ್ತಿರುವ 200 ಯೂನಿಟ್ ಉಚಿತ ವಿದ್ಯುತ್ ನಿಂದಾಗಿ 1.6 ಕೋಟಿ ಮನೆಗಳ ದೀಪ ಬೆಳಗುತ್ತಿದ್ದು, ಇದಕ್ಕಾಗಿ ಸರ್ಕಾರ ಈವರೆಗೂ ಒಟ್ಟು 8,844 ಕೋಟಿ ರೂ. ವಿನಿಯೋಗಿಸಿದೆ.
ಗೃಹಲಕ್ಷ್ಮಿ
ಯೋಜನೆಯಡಿ ಪ್ರತಿ ತಿಂಗಳು ಮಹಿಳೆಯರಿಗೆ ನೀಡುತ್ತಿರುವ 2000 ರೂಪಾಯಿ ರಾಜ್ಯದ 1.25 ಕೋಟಿ ಮಹಿಳೆಯರನ್ನು ಸಶಕ್ತಗೊಳಿಸುತ್ತಿದ್ದು, ಇದಕ್ಕಾಗಿ ಸರ್ಕಾರ ಈವರೆಗೂ ಒಟ್ಟು 25,259 ಕೋಟಿ ರೂ. ಭರಿಸಿದೆ.
ಅನ್ನಭಾಗ್ಯ
ಯೋಜನೆಯಡಿ 4.08 ಕೋಟಿ ಜನರಿಗೆ ಹೆಚ್ಚುವರಿ 5 ಕೆ.ಜಿ. ಆಹಾರಧಾನ್ಯದ ಬದಲಿಗೆ 170 ರೂ.ನಂತೆ ಇದುವರೆಗೂ ಸರ್ಕಾರ 7,763 ಕೋಟಿ ರೂ. ಪಾವತಿಸಿದೆ.
ಯುವನಿಧಿ
ಯೋಜನೆಯಡಿ ಡಿಪ್ಲೊಮಾ ಮತ್ತು ಪದವೀಧರರಿಗೆ ಪ್ರತಿ ತಿಂಗಳು ನೀಡುತ್ತಿರುವ 1500-3000 ರೂ. ರಾಜ್ಯದ 1.31 ಲಕ್ಷ ನಿರುದ್ಯೋಗಿ ಯುವಕರನ್ನು ಸಶಕ್ತಗೊಳಿಸಿದೆ. ಇದಕ್ಕಾಗಿ ಸರ್ಕಾರವು ಈವರೆಗೂ 91 ಕೋಟಿ ರೂ. ನೀಡಿದೆ.
'ಸಮಾಜದ ಎಲ್ಲಾ ವರ್ಗಗಳಿಗೂ...
ಹಸಿವಿನಿಂದ ಸ್ವಾತಂತ್ರ್ಯ
ಬಡತನದಿಂದ ಸ್ವಾತಂತ್ರ್ಯ
ಕತ್ತಲೆಯಿಂದ ಸ್ವಾತಂತ್ರ್ಯ
ಸಂಕೋಲೆಗಳಿಂದ ಸ್ವಾತಂತ್ರ್ಯ
ನಿರುದ್ಯೋಗದಿಂದ ಸ್ವಾತಂತ್ರ್ಯ
... ಸಿಕ್ಕಾಗ ಮಾತ್ರ ನಿಜವಾದ ಸ್ವಾತಂತ್ರ್ಯ ಸಿಕ್ಕಿದಂತಾಗುತ್ತದೆ.'
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ...
ಗ್ಯಾರಂಟಿ ಸರ್ಕಾರ...
ನುಡಿದಂತೆ ನಡೆದಿದ್ದೇವೆ...
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಅನ್ನಭಾಗ್ಯ ಬಡವರಿಗೆ ಪ್ರತಿ ತಿಂಗಳು 10 kg 5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
dipr.karnataka.gov.in
ಕರ್ನಾಟಕ ವಾರ್ತೆ